

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 25 Saturday 28-09-2024 E-mail : maruti.b.hosamani76@gmail.com Page: 4 Price : Rs. 1/-


## ಸಂಕಲನ ಆರಂಭಿಸಿದ "ತಗ್ಗಟ್ಟಿ" ಸಿನೆಮಾ





**ಸಿಹಿ ಕಹಿ ಸುದ್ದಿ**

**ಬೆಂಗಳೂರು** : ಸಿಸಿ ಸಿನಿ ಪ್ರೊಡಕ್ಷನ್ ರವರ ಚೊಚ್ಚಲ ಕಾಣಿಕೆ ಶ್ರೀ ಚೆನ್ನಿಗರಾಯಸ್ವಾಮಿ ಆಶೀರ್ವಾದದೊಂದಿಗೆ ಹರಿಹರನ್ ಬಿ.ಪಿ. ನಿರ್ದೇಶನದಲ್ಲಿ "ತಗ್ಗಟ್ಟಿ" ಎಂಬ ಸಾಂಸಾರಿಕ ಥ್ರಿಲ್ಲರ್ ಪ್ರೀತಿ ಬಾಂಧವ್ಯದ ಕಥಾ ಹಂದರದ ಸಿನೇಮಾ ಸದ್ದಿಲ್ಲದೆ ಶೇ.95 ರಷ್ಟು ಭಾಗದ ಚಿತ್ರೀಕರಣ ಮುಗಿಸಿ ಸಂಕಲನ ಕಾರ್ಯ ಆರಂಭಿಸಿದೆ.

"ತಗ್ಗಟ್ಟಿ" ಇದು ಕರ್ನಾಟಕದ ತಮಿಳುನಾಡಿನ ನಡುವಿನ ಅಂಚಿನಲ್ಲಿರುವ ಒಂದು ಹಳ್ಳಿಯ ಹೆಸರು. ಆ ಹಳ್ಳಿಯಲ್ಲಿ ನಡೆದ ಪವಾಡದಮೇಲೆಸೃಷ್ಟಿಯಾಗಿರುವ ಸತ್ಯ ಘಟನೆಯನ್ನು ಆಧರಿಸಿದ ಕಥೆ ಇದು. ಬಹುತಾರಾ ಬಳಗದೊಂದಿಗೆ ಮೂಡಿ ಬರುತ್ತಿರುವ ಚಿತ್ರ ಇದಾಗಿದ್ದು. ತಾರಾಗಣದಲ್ಲಿ ರೇಖಾದಾಸ್, ಶಿವಕುಮಾರ ಆರಾಧ್ಯ, ಮಂಡ್ಯ ಸಿದ್ದು, ಡೈಮಂಡ್ ರಾಜಣ್ಣ , 4 ಯುವ ನಾಯಕ ನಾಯಕಿಯರು ಇದ್ದು, ಚಲನ ಚಿತ್ರ ಹಾಗೂ ಕಿರು ತೆರೆಗಳಲ್ಲಿ ಖಳನಟ ಮುಖ್ಯ ಪಾತ್ರವನ್ನು ವಹಿಸುವ ರೇಣು ಶಿಖಾರಿಯವರು ಈ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಬಾಲರಾಜ್ ವಾಡಿಯ ತಂದೆ ಮಗನ ಪಾತ್ರವೂ ತುಂಬಾ ಪ್ರಮುಖವಾಗಿದೆ. ಪ್ರಮುಖ ಪಾತ್ರ ಧಾರಿಯಾಗಿ ಪ್ರವೀಣ್ ಕುಮಾರ್ ಟಿ.ಸಿ ಅಮೋಘವಾಗಿ ಅಭಿನಯಿಸಿದ್ದಾರೆ. ಸಾಹಿತ್ಯವನ್ನು ಲವ್ ಇನ್ ಮಂಡ್ಯ ಖ್ಯಾತಿಯ ಅರಸುಅಂತಾರೆಮತ್ತು'ಮುಸ್ಸಂಜೆ ಮಾತು' ಚಲನ ಚಿತ್ರ ಪ್ರಖ್ಯಾತ ಸಾಹಿತಿ ರೇವಣ್ಣ ನಾಯಕ್ ದೊಡ್ಡ ಕಾಡನೂರು ರಚಿಸಿದ್ದಾರೆ. ಕನ್ನಡ ಚಿತ್ರ ರಂಗದ ಬಾದಾಮಿ ಎಂದು ಕರೆಯಲ್ಪಡುವ ಎಟಿ. ರವೀಶ್ ಸಂಗೀತ ಸಂಯೋಜಿಸಿದ್ದಾರೆ. ನಾಗೇಂದ್ರ ರಂಗಹರಿ ಅವರು ಅದ್ಭುತ ಮನೋಹರವಾಗಿ ಛಾಯಾಗ್ರಹಣ ಮಾಡಿದ್ದು ಪ್ರಸಾಧನ ಗುರು (ಆನಂದ) ಸಂಕಲನ ಮಾಂತ್ರಿಕ ಮುತ್ತುರಾಜ್ .ಟಿ ಅವರ ಸಂಕಲನವಿದೆ. ಪಿ.ಆರ್.ಓ ಸುಧೀಂದ್ರ ವೆಂಕಟೇಶ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಸಹಾಯಕ ನಿರ್ದೇಶನ ಎಂ.ಡಿ.ರಾಘವೇಂದ್ರ, ಚಿತ್ರದ ನಿರ್ಮಾಪಕರು ಚಂದ್ರಮಾ ಚನ್ನಾಚಾರಿ ಆಗಿದ್ದಾರೆ.

ಚಿಕ್ಕಮಂಗಳೂರು, ಊಟಿ, ಬೆಂಗಳೂರು, ಕನಕಪುರ ಸುತ್ತಮುತ್ತ 84 ದಿನಗಳ ಕಾಲ ಚಿತ್ರೀಕರಣವಾಗಿದೆ . ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು ಒಂದು ಹಾಡಿನ ಚಿತ್ರೀಕರಣ ಮಾತ್ರ ಬಾಕಿ ಇದ್ದು. ಮುತ್ತುರಾಜ್ ಅವರು ಸಂಕಲನ ಕಾರ್ಯ ಆರಂಭಿಸಿದ್ದು, ಶೀಘ್ರದಲ್ಲೇ ಉಳಿದ ಒಂದು ಹಾಡಿನ ಚಿತ್ರೀಕರಣ ಮುಗಿಸಿ ಬೇಗನೇ ಬೆಳ್ಳಿತೆರೆಗೆ ತರುವ ಆಲೋಚನೆ ಇದೆ ಎಂದು ನಿರ್ದೇಶಕ ಹರಿಹರನ್ .ಬಿ.ಪಿ. ಹೇಳುತ್ತಾರೆ.

**ವರದಿ: ಡಾ.ಪ್ರಭು ಗಂಜಿಹಾಳ**
**ಮೊ: 9448775346**

## ಬೇಡಿಕೆ ಈಡೇರಿಕೆಗೆ ಸಿ.ಇ.ಓ.ಗೆ ಒಂದು ವಾರ ಗಡುವು-ಬೇಡಿಕೆ ಈಡೇರದಿದ್ದರೆ-ಉಗ್ರ ಹೋರಾಟ





**ಸಿಹಿ ಕಹಿ ಸುದ್ದಿ,**

**ಹುನಗುಂದ :** ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಗ್ರಾಮೀಣ ಕೂಲಿ ಕಾರ್ಮಿಕರ (ಗ್ರಾಕೂಸ್) ವಿವಿಧ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುವುದಾಗಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಪ್ರತಿಭಟನಾ ನಿರತ ಕಾರ್ಮಿಕರಿಗೆ ಭರವಸೆಯನ್ನು ನೀಡಿದರು.

ನಾಲ್ಕು ತಿಂಗಳಿಂದ ಕೂಲಿ ನೀಡಿಲ್ಲ, ಎನ್.ಎಂ.ಆರ್ ಜೀರೋ ಮಾಡುವುದು, ಎರಡು ವರ್ಷಗಳಿಂದ ವೈದ್ಯಕೀಯ ವೆಚ್ಚ ನೀಡದೇ ಇರುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತಿಭಟನಾ ಸ್ಥಳಕ್ಕೆ ಬರುವಂತೆ ಪಟ್ಟು ಹಿಡಿದು ಪಟ್ಟಣದ ತಾಲೂಕ ಪಂಚಾಯತಿಯ ಮುಂಭಾಗದಲ್ಲಿ ನಡೆಸುತ್ತಿರುವ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆರ ಎರಡನೇ ದಿನದ ಪ್ರತಿಭಟನೆಗೆ ಆಗಮಿಸಿ ಕಾರ್ಮಿಕರೊಟ್ಟಿಗೆ ಕುಳಿತು ಕೊಂಡು ಅವರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ನರೇಗಾ ಯೋಜನೆ ಅಡಿಯಲ್ಲಿ ಸಾವಿರಾರು ಕೋಟಿ ಕೆಲಸ ನೀಡಿದರೂ ಸುಮಾರು ತಾಲೂಕಿನ ಕೆಲಸದ ಸ್ಥಳಕ್ಕೆ ಹೋಗಿ ನಾನು ನೋಡಲಾಗಿಯೂ ಎಲ್ಲೂ ಕೂಡ ಕೆಲಸದ ಬಗ್ಗೆ ತೃಪ್ತಿಯಾಗಿಲ್ಲ. ಎಲ್ಲೋ ಒಂದು ಕಡೆ ಸಮಸ್ಯೆ ಇರುತ್ತೆ ಆದರೆ ನೀವು ಮಾಡುವ ಕೆಲಸ ಶೇ 60% ರಿಂದ ಶೇ 80% ರಷ್ಟು ಆದರೂ ಸರಿಯಾಗಿ ಕೆಲಸವಾಗಬೇಕು. ನೀವು ಮಾಡುವ ಕೆಲಸ ಜನರಿಗೆ ಅನುಕೂಲ ಕಾರಿಯಾಗಿರಬೇಕು ಎಂದರು. ಗ್ರಾಕೂಸ್ ಮುಖಂಡ ಮಹಾಂತೇಶ ಹೊಸಮನಿ ಮಾತನಾಡಿ ಪಂಚಾಯತ ಅಧಿಕಾರಿಗಳು ಗ್ರಾಕೂಸ್ ಗೆ ಒಂದು ನ್ಯಾಯ ಮತ್ತು ನಾನ್ ಗ್ರಾಕೂಸ್ಗೆ ಇನ್ನೊಂದು ನ್ಯಾಯ ಎನ್ನುವಂತೆ ವರ್ತಿಸುತ್ತಿದ್ದಾರೆ. ಗ್ರಾಕೂಸ್ಗಳಿಗೆ 50 ಜನರಿದ್ದರೇ ಮಾತ್ರ ಕೆಲಸ ಕೊಡುತ್ತಾರೆ ನಾನ್ ಗ್ರಾಕೂಸ್ ಗಳಿಗೆ 10 ಜನರಿದ್ದರೂ ಅವರಿಗೆ ಕೆಲಸ ನೀಡುತ್ತಾರೆ ಈ ತಾರತಮ್ಯ ಯಾಕೆ ಸರ್ ಎಂದು ಸಿಇಓ ಮುಂದೆ ಆರೋಪವನ್ನು ಮಾಡಿದಾಗ ಅದ-ಕ್ಕೆ ಉತ್ತರಿಸಿ ನಮಗೆ ಗ್ರಾಕೂಸ್ ಮತ್ತು ನಾನ್ ಗ್ರಾಕೂಸ್ ಮುಖ್ಯವಲ್ಲ ನಮಗೆ ನರೇಗಾ ಯೋಜನೆ ಮುಖ್ಯ. ಪ್ರತಿ ವರ್ಷ ನರೇಗಾ ಯೋಜನೆಯ ಸುಧಾರಣೆ ಗೋಸ್ಕರ ನಾವೆಲ್ಲಾ ಶ್ರಮಿಸ ಬೇಕಾಗಿದೆ. ನಮ್ಮಲ್ಲಾಗಿರುವಂತ ಕೆಲವೊಂದು ಲೋಪ ದೋಷಗಳನ್ನು ನಮ್ಮ ಅಧಿಕಾರಿಗಳ ಮೂಲಕ ಸರಿ ಪಡಿಸುವ ಕೆಲಸವನ್ನು ಮಾಡಲಾಗುವುದು. ನೀವು ತೆಗೆದು ಕೊಂಡಂತ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು ಎಂದು ಸಲಹೆ ನೀಡಿದರು. ಗ್ರಾಕೂಸ್ ಕೆಲಸ ಮಾಡಿರುವುದನ್ನು ಪದೇ ಪದೇ ಜೀರೋ ಮಾಡುತ್ತಿದ್ದು ಅಂತ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದು ಕೊಳ್ಳಬೇಕೆಂದು ಕಾರ್ಮಿಕರು ಪಟ್ಟು ಹಿಡಿದಾಗ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಮುಲಾಜಿಲ್ಲದೇ ಕ್ರಮ ತೆಗೆದು ಕೊಳ್ಳುವುದಾಗಿ ತಿಳಿಸಿದರು. ಕಳೆದ ಎರಡು ವರ್ಷಗಳಿಂದ ವೈದ್ಯಕೀಯ ವೆಚ್ಚವನ್ನು ಪ್ರತಿಯೊಂದು ಗ್ರಾಮ ಪಂಚಾಯಿತಿ ನೀಡುತ್ತಿಲ್ಲ ಎನ್ನುವಂತಹ ಆರೋಪವನ್ನು ಕೂಡ ಕಾರ್ಮಿಕರು ಮಾಡಿದರು. ಆಗ ಕೆಲಸದ ಮೇಲೆ ಕಾರ್ಮಿಕರಿಗೆ ಏನಾದರೂ ಆರೋಗ್ಯ ಸಮಸ್ಯೆಗಳು ಉಂಟಾದಾಗ ಅವರು ಚಿಕಿತ್ಸೆ ಪಡೆದಿರುವಂತ ದಾಖಲಾತಿ ಆಧಾರದ ಮೇಲೆ ವೈದ್ಯಕೀಯ ವೆಚ್ಚವನ್ನು ನೀಡಲಾಗುವುದು ಸಿಇಓ ತಿಳಿಸಿದರು. ನಮ್ಮ ಬೇಡಿಕೆಗಳನ್ನು ಒಂದು ವಾರದಲ್ಲೇ ಈಡೇರಿಸುವಂತೆ ಗ್ರಾಮೀಣ ಕೂಲಿ ಕಾರ್ಮಿಕರು ಸಿಇಓ ಅವರಿಗೆ ಗಡುವು ನೀಡಿದಾಗ ಇದಕ್ಕೆ ಸಿಇಓ ನರೇಗಾ ಯೋಜನೆಯಲ್ಲಿ ಅನೇಕ ತಾಂತ್ರಿಕ ವ್ಯವಸ್ಥೆ ಇರುವುದರಿಂದ ನಿಮ್ಮೆಲ್ಲಾ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುವುದಾಗಿ ಸಮಾಧಾನದ ಭರವಸೆಯನ್ನು ನೀಡಿದ ಮೇಲೆ ಗ್ರಾಮೀಣ ಕೂಲಿ ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ಹಿಂಪಡೆದು ನಂತರ ತಮ್ಮ ಬೇಡಿಕೆಗಳ ಮನವಿಯನ್ನು ಸಿಇಓ ಅವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾ.ಪಂ ಇಓ ಮುರಳಿಧರ ದೇಶಪಾಂಡೆ, ನರೇಗಾ ಯೋಜನೆ ಎಡಿಗಳಾದ ಮಹಾಂತೇಶ ಕೋಟಿ, ಶಿರಗುಪ್ಪಿ, ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆಯ ಮುಖಂಡರಾದ ಶಾರದಾ ಪಲನಗೌಡ್ರು, ಸೌಮ್ಯ ವಟವಟಿ, ದೀಪಾ ತೋಟದ, ರೇಣುಕಾ ತುಪ್ಪದ,ಪರಶು ಮಾದರ, ಯಮನೂರು ಹೊಸಮನಿ, ಸುವರ್ಣ ತೊಗರಿ,ಅಮರೇಶ ನಂದವಾಡಗಿ ಸೇರಿದಂತೆ ಅನೇಕ ಕಾರ್ಮಿಕರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಎಂ. ಬಂಡರಗಲ್ಲ..ಹುನಗುಂದ**

## ಕೆರುಟಗಿ ತಾಂಡಕ್ಕೆ ಕುಡಿಯುವ ನೀರು ಕೊಡಿ-ಜಯ ಕರ್ನಾಟಕ ಸಂಘಟನೆಯಿಂದ ಆಗ್ರಹ




**ಸಿಹಿ ಕಹಿ ಸುದ್ದಿ**

**ದೇವರ ಹಿಪ್ಪರಗಿ :** ತಾಲೂಕಿನ ಕೆರುಟಗಿ ಗ್ರಾಮ ಪಂಚಾಯತಿ ಸಿಬ್ಬಂದಿಯಾದ ಕಾಂತು ರಾಠೋಡ, ಇವರಿಗೆ ಜಯ ಕರ್ನಾಟಕ ಸಂಘಟನೆಯ ವತಿಯಿಂದ ಮನವಿ ಸಲ್ಲಿಸಲಾಯಿತು, ಈ ಹೋರಾಟದ ನೇತೃತ್ವವನ್ನು ಜಯ ಕರ್ನಾಟಕ ಸಂಘಟನೆಯ ಜಿಲ್ಲಾ ವಕ್ತಾರರು, ಹಾಗೂ ಸಿಂದಗಿ ತಾಲೂಕಾ ಉಸ್ತುವಾರಿಗಳು ಚನ್ನಪ್ಪಗೌಡ ಎಸ್, ಬಿರಾದಾರ, ಇವರು ಕೆರುಟಗಿ ತಾಂಡಾದಲ್ಲಿ ಕುಡಿಯುವ ನೀರು ಸಾಕಷ್ಟು ಇದ್ದು ಅದನ್ನು ಸರಿಯಾಗಿ ಪೂರೈಸುತ್ತಿಲ್ಲ ವಾಟರ್ ಮ್ಯಾನ್ ಹಲವಾರು ತಿಂಗಳಿಂದ ಕಾರ್ಯ ನಿರ್ವಹಿಸುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದ-ರೆ ಯಾಗುತ್ತಿದೆ ಮೇಲ್ಲಾಧಿಕಾರಿಗಳು ನ್ಯಾಯ ಒದಗಿಸಿ ಕೊಡಬೇಕೆಂದು ಆಗ್ರಹಿಸಿದರು, ಹಾಗೂ ದೇವರ ಹಿಪ್ಪರಗಿ ತಾಲೂಕಾಧ್ಯಕ್ಷರಾದ ಸಿದ್ರಾಮಪ್ಪ ಎಸ್, ಅವಟಿ, ಕೆರುಟಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಮತ್ತು ಕಾರ್ಯದರ್ಶಿಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ ಎಂದು ಹೇಳಿದರು, ಈ ಸಮಸ್ಯಗಳಿಗೆ ಮೇಲ್ಲಾಧಿಕಾರಿಗಳು ಒಂದು ವಾರದಲ್ಲಿ ಸ್ಪಂದಿಸದ್ದಿದ್ದರೆ ಗ್ರಾಮ ಕಾರ್ಯಲಯದ ಮುಂದೆ ಜಯ ಕರ್ನಾಟಕ ಸಂಘಟನೆಯ ವತಿಯಿಂದ ಉಗ್ರವಾದ ಹೋರಾಟವನ್ನು ಕೈಕೊಳ್ಳಲಾಗುವುದು ಎಂದು ಈ ಮೂಲಕ ಎಚ್ಚರಿಸಿದರು. ಮತ್ತು ಸಿಂದಗಿ ತಾಲೂಕಾಧ್ಯಕ್ಷರು, ಸಂತೋಷ ಮನಗೂಳಿ, ಹಾಗೂ ಜಯ ಕರ್ನಾಟಕ ಸಂಘಟನೆಯ ಪದಾಧಿಕಾರಿಗಳಾದ ರಮೇಶ ರಾಠೋಡ, ಬಸವರಾಜ ಇಂಗಳಗಿ, ಸಂತೋಷ ಅಂಗಡಿ, ಮತ್ತು ಗ್ರಾಮ ಘಟಕದ ಪದಾಧಿಕಾರಿಗಳು ಸುಭಾಸ ಚಟ್ಟರಕಿ, ಶಿವಕಾಂತ ರಾಠೋಡ, ಬಾಬು ಚವ್ಹಾಣ, ಅಪ್ಪು ಚಟ್ಟರಕಿ, ನಿಂಗರಾಜ ಚವ್ಹಾಣ,ಬಾಬು ರಾಠೋಡ, ದೇವಸಿಂಗ್ ರಾಠೋಡ, ಮೋಹನ ಚವ್ಹಾಣ,ಮಲ್ಲನಗೌಡ ಬಿರಾದಾರ, ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ. ದೇವರ ಹಿಪ್ಪರಗಿ**

## ಸಹಕಾರ ಕ್ಷೇತ್ರ ಬೆಳೆದರೆ ದೇಶದ ಅಭಿವೃದ್ಧಿ



**ಬನಹಟ್ಟಿ :** ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಗ್ರಾಹಕರ, ಶೇರುದಾರರ ಮತ್ತು ನಿರ್ದೇಶಕರ ಪರಸ್ಪರ ಸಹಕಾರ ಮುಖ್ಯ. ಸಹಕಾರ ಕ್ಷೇತ್ರ ಬೆಳೆದರೆ ದೇಶದ ಅಭಿವೃದ್ಧಿಯೆಂದು ಬನಹಟ್ಟಿ ಅಲ್ಪಸಂಖ್ಯಾತರ ಸೊಸೈಟಿ ಅಧ್ಯಕ್ಷ ಇರ್ಶಾದ್ ಮೋಮಿನ್ ತಿಳಿಸಿದರು.

ಬನಹಟ್ಟಿಯ ಸಂಘದ ಕಚೇರಿ ಆವರಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನೇಕಾರಿಕೆ ಜನಾಂಗ ಹೊಂದಿರುವ ರಬಕವಿ-ಬನಹಟ್ಟಿಯಲ್ಲಿ ನೇಕಾರರ ಅಭ್ಯುದಯಕ್ಕೆ ಶ್ರಮಿಸುವದು ಅವಶ್ಯವಾಗಿದೆಯೆಂದರು. ಅಲ್ಲದೆ ಪ್ರಸಕ್ತ ವರ್ಷ 22.60 ಲಕ್ಷ ರೂ.ಗಳಷ್ಟು ಲಾಭ ಗಳಿಸಿರುವುದು ವಿಶೇಷವಾಗಿದೆ ಎಂದರು.

ಬುಡಾನ್ಸಾಬ್ ಜಮಾದಾರ ಮಾತನಾಡಿ, ಆರ್ಥಿಕ ಬೆಳವಣಿಗೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿಗಿಂತಲೂ ಸಹಕಾರ ಸಂಘಗಳ ಕೊಡುಗೆ ಅಪಾರವೆಂದರು. ಸರ್ಕಾರದ ಆಶಯಕ್ಕೆ ತಕ್ಕಂತೆ ಸಹಕಾರಿ ಸಂಘಗಳು ಕೃಷಿಕರ, ನೇಕಾರರ ಅಭ್ಯುದಯಕ್ಕೆ ಕೊಡುಗೆ ನೀಡಿವೆಯೆಂದರು.

ಯುನುಸ್ ನಿಪ್ಪಾಣಿ, ಮುಜಫರ್ ಆಲಮೇಲ, ಅಶ್ರಫ್ ಮಹಾಲಿಂಗಪೂರ, ತೌಫೀಕ್ ಮುಲ್ಲಾ, ಸಲೀಂ ಬಾರಿಗಡ್ಡಿ, ಅಬೂಬಕರ ಗಾಡಬೋಲೆ, ಸಿರಾಜಸಾಬ ಬನಹಟ್ಟಿ, ಶ್ರೀಮತಿ ಆಯೇಶಾ ಮಲೀಕ ಬಾರಿಗಡ್ಡಿ, ಶ್ರೀಮತಿ ರುಬೀನಾ ರಫೀಕ್ ಡಾಂಗೆ, ಪ್ರಕಾಶ ಬೆಲ್ಲಂ, ರಾಮಪ್ಪ ದಳವಾಯಿ, ತಾರಿಪುರ ರಹೆಮಾನ್ ಬಾಗಲಕೋಟ, ಅಶ್ಪಾಕ್ ಸೌದಾಗರ, ಅಬುಬಕರ ಮೋಮಿನ್, ಶಮಸುದ್ದೀನ ಗುರಾಡಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## "ಗೌರವಿಸುವ ಮನದವರಿಗೆ ನಮಸ್ಕಾರದಿ ಪುರಸ್ಕರಿಸು"

ತನು ಮನ ಧನ ಸಹಾಯದಿ ಬಳಸುವ ನಿಜ ಸಿರಿ
ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯ
ಆರು ಶತ್ರು ನಾಶ ಮಾಡು
ಸುಭಾವದಿ ನಗು ಮೌನ ವಿನಯ ಬಳಸುವ ಸಾಮರ್ಥ್ಯ
ಇರಲಿ
ಕೀಳು ಅವಮಾನ ಕುಲದ ಜಾತಕ ಬಳಸದಿರು
ಸ್ನೇಹಿತರ ಸಹೋದರ ಸಂಬಂಧ ಸ್ವಾರ್ಥತೆಗೆ ಬಳಸದಿರು
ತಂದೆ ತಾಯಿ ಗುರು ಹಿರಿಯರ ಅವಮಾನಿಸದಿರು
ಮನೋವಿಕಲ ವಿಕಲಚೇತನರಿಗೆ ಸಹಾಯ ಹಸ್ತ ಚಾಚು
ನಂಬಿಕೆಯ ಮುಗ್ಧರಿಗೆ ದ್ರೋಹ ಬಗೆಯದಿರು
ಸಿರಿ ಹಣ ಗಳಿಕೆಗೆ ನಯವಂಚಕ ಹೊಂಚುತನಬೇಡ
ಕಷ್ಟ ನಷ್ಟದಿ ಹೆದರಿ ನಿಷ್ಠೆ ಪ್ರಾಮಾಣಿಕತೆ ಬಿಡದಿರು
ಶ್ರಮ ವಿರದ ಉಚಿತತೆಯ ಸೌಲಭ್ಯ ತಿರಸ್ಕರಿಸು
ಗೌರವಿಸುವ ಮನದವರಿಗೆ ನಮಸ್ಕಾರದಿ ಪುರಸ್ಕರಿಸು
ಸಮಯಕ್ಕಾದವರನ್ನು ಕೃತಜ್ಞನಾಗಿರು
ಗಂಡ /ಹೆಂಡತಿ ಬೇರೆಯವರ ಮುಂದೆ ಅವಮಾನಿಸದಿರು
ಮಕ್ಕಳ ಎದಿರು ತಂದೆ ತಾಯಿ ಗುರುವಿನ ತಪ್ಪು ಹೇಳದಿರು

* * *



**-ಶ್ರೀ ದೇಶಂಸು**
**ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿ**
**"ವಿಶ್ವ ಆರೋಗ್ಯ ಸಂಜೀವಿನಿ"**
**ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು**
**ಬಾಗಲಕೋಟೆ**

## ಶ್ರೀ ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ, ನರೇಗಲ್ ಅನ್ನದಾನೇಶ್ವರ ಕಾಲೇಜಿಗೆ - ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನ



**ಸಿಹಿ ಕಹಿ ಸುದ್ದಿ,**

**ಹುಲಕೋಟಿ** : 2024-25 ನೇ. ಶೈಕ್ಷಣಿಕ ವರ್ಷದ ಗದಗ ಜಿಲ್ಲಾ ಮಟ್ಟದ ಕ್ರೀಡಾಕೂಟಗಳು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಗದಗ ಮತ್ತು ಸ್ವಾಮಿ ವೀವೇಕಾನಂದ ಪದವಿ ಪೂರ್ವ ಕಾಲೇಜು, ಹುಲಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ: 13-09-2024 ರಿಂದ 19-09-2024 ರ ವರೆಗೆ ಜರುಗಿದವು. ಈ ಕ್ರೀಡಾಕೂಟದಲ್ಲಿ ಶ್ರೀ ಅನ್ನದಾನೇಶ್ವರ ಪದವಿ ಪೂರ್ವ ಮಹಾವಿದ್ಯಾಲಯದ ಕ್ರೀಡಾಪಟುಗಳು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನವನ್ನು ಪಡೆಯುವ ಮೂಲಕ ಉತ್ತಮ ಸಾಧನೆಗೈದು ಕಾಲೇಜಿಗೆ ಸಮಗ್ರ ವೀರಾಗ್ರಣಿ ಪ್ರಶಸ್ತಿಯನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ, ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿಸಾಧನೆಗೈದುರಾಜ್ಯಮಟ್ಟಕ್ಕೆಆಯ್ಕೆಯಾದ ಕ್ರೀಡಾಪಟುಗಳಿಗೆನಮ್ಮಮಹಾನಸಂಸ್ಥೆಯಅಧ್ಯಕ್ಷರಾದ ಪರಮ ಪೂಜ್ಯ ಶ್ರೀ. ಮುಪ್ಪಿನ ಬಸವಲಿಂಗ ಮಹಾ ಸ್ವಾಮಿಗಳು, ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು, ಆಡಳಿತಾಧಿಕಾರಿಗಳು, ಹಾಗೂ ಕಾಲೇಜು ಆಡಳಿತ ಮಂಡಳಿಯ ಚೇರಮನ್ನರು ಮತ್ತು ಸದಸ್ಯರುಗಳು ಹಾಗೂ ಜಿಮ್ಖಾನ ವಿಭಾಗದ ಚೇರಮನ್ನರು, ದೈಹಿಕ ನಿರ್ದೇಶಕರು, ಪ್ರಾಚಾರ್ಯರು ಮತ್ತು ಸಿಬ್ಬಂದಿ ವರ್ಗ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಗುಂಪು ಆಟಗಳಲ್ಲಿ ಬಾಲಕ ಮತ್ತು ಬಾಲಕಿಯರು ಎರಡು ವಿಭಾಗದಲ್ಲಿ ಖೋ ಖೋ, ಬಾಲ್ ಬ್ಯಾಡ್ಮಿಂಟನ್, ಟೆನ್ನಿಕಾಯಿಟ್, ಚೆಸ್, ಟೆನ್ನಿಸ್ ವ್ಹಾಲಿಬಾಲ್, ಜಂಪ-ರೋಪ, ಕುಸ್ತಿ, ಕರಾಟೆ, ಯೋಗ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ. ಹ್ಯಾಂಡಬಾಲ್, ಫುಟ್ಬಾಲ್, ಕಬ್ಬಡಿ, ಥ್ರೋಬಾಲ್, ಹಾಕಿ, ಟೇಬಲ್ ಟೆನ್ನಿಸ್ ಕ್ರೀಡೆಯಲ್ಲಿ ದ್ವಿತೀಯ ಸ್ಥಾನ ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಬಾಲಕರ ವ್ಯಯಕ್ತಿಕ ಆಟಗಳು:-

ನೀಲಪ್ಪ ಜೊಲಗುಡ್ಡ 5 ಕಿ.ಮಿ ನಡಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಪ್ರಜ್ವಲ್ಕುಮಾರ ಪೂಜಾರ ಗುಂಡು ಎಸೆತದಲ್ಲಿ ಪ್ರಥಮ, ದಾಸಪ್ಪ ಮೂಲಿಮನಿ 400 ಮೀ ಹರ್ಡಲ್ಸನಲ್ಲಿ ದ್ವಿತೀಯ, ಹರೀಶ.ಬಿ.ಎಚ್ ಮತ್ತು ತಂಡ 4*100 ಮೀ ಮತ್ತು 4*400 ಮೀ ರಿಲೇಯಲ್ಲಿ ದ್ವಿತೀಯ ಸ್ಥಾನ, ಬಿ.ಸಾಗರ ಎತ್ತರ ಜಿಗಿತದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಬಾಲಕೀಯರ ವ್ಯಯಕ್ತಿಕ ಆಟಗಳು:-

ಕಾವ್ಯ ಅಬ್ಬಿಗೇರಿ 200 ಮೀ, 400 ಮೀ ಓಟದಲ್ಲಿ ಪ್ರಥಮ, ಹಾಗೂ ಉದ್ದಜಿಗಿತದಲ್ಲಿ ದ್ವಿತೀಯ ಸ್ಥಾನ, ಬಸಮ್ಮ ಕುರಿ 1500 ಮೀ, 3000 ಮೀ ಓಟದಲ್ಲಿ ಪ್ರಥಮ, ಆಯಿಷಾ ಹ್ಯಾಮರ್ ಥ್ರೋದಲ್ಲಿ ಪ್ರಥಮ ಹಾಗೂ ಗುಂಡು ಎಸೆತದಲ್ಲಿ ದ್ವಿತೀಯ, ಈರಮ್ಮ ಬದಿಮನಾಳ 400 ಮೀ ಹರ್ಡಲ್ಸ ಹಾಗೂ ತ್ರೀವಿಧ ಜಿಗಿತದಲ್ಲಿ ಪ್ರಥಮ, ಕ್ರಾಸ್ ಕಂಟ್ರಿಯಲ್ಲಿ ಕಾವೇರಿ ಜಟ್ಟಿ ಪ್ರಥಮ ಹಾಗೂ ಪವಿತ್ರಾ ತಳ್ಳಿಕೇರಿ ದ್ವಿತೀಯ, ಶಕುಂತಲಾ ಕಾಡಪ್ಪನವರ ಭಲ್ಲೆ ಎಸೆತದಲ್ಲಿ ದ್ವಿತೀಯ, 4*100 ಮೀ ಮತ್ತು 4*400 ಮೀ ರಿಲೇಯಲ್ಲಿ ಕಾವ್ಯಾ ಅಬ್ಬಿಗೇರಿ ತಂಡ ದ್ವಿತೀಯ ಸ್ಥಾನ, ವಿಜಯಲಕ್ಷ್ಮಿ ಹಳ್ಳಿ 100 ಮೀ ಓಟದಲ್ಲಿ ತೃತೀಯ ಸ್ಥಾನವನ್ನು ಪಡೆದು ಆಯ್ಕೆಯಾಗಿದ್ದಾರೆ ಈ ಮೂಲಕ ಒಟ್ಟು 120 ಕ್ರೀಡಾಪಟುಗಳು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ಶ್ರೀ. ವಾಯ್.ಸಿ. ಪಾಟೀಲ ಅವರು ತಿಳಿಸಿದ್ದಾರೆ.

## ಸಂಘದೊಂದಿಗೆ ರೈತರ ಸಹಕಾರವಿರಲಿ



**ರಬಕವಿ-ಬನಹಟ್ಟಿ :** ರಾಜ್ಯದೆಲ್ಲೆಡೆ ರೈತರಿಗೆ ಇನ್ನಷ್ಟು ಯೋಜನೆಗಳನ್ನು ತಲುಪಿಸುವ ನಿಟ್ಟಿನಲ್ಲಿ ರೈತರ ಸಂಘಗಳು ಶ್ರಮಿಸುವಲ್ಲಿ ಕಾರಣವಾಗಿದ್ದು, ಸಂಘಗಳೊಂದಿಗೆ ರೈತರ ಸಹಕಾರ ಅತ್ಯಗತ್ಯವೆಂದು ಪಿಕೆಪಿಎಸ್ ಅಧ್ಯಕ್ಷ ಬಸಪ್ಪ ಶೇಗುಣಸಿ ಹೇಳಿದರು.

ಯಲ್ಲಟ್ಟಿಯ ನಿರುಪಾಧೀಶ್ವರ ಮಠದಲ್ಲಿ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರಿಂದಲೇ ನಿರ್ಮಾಣವಾದ ಸಂಘಗಳು ಇದೀಗ ರೈತರಿಂದ ದೂರ ಉಳಿಯುವಲ್ಲಿ ಕಾರಣವಾಗುತ್ತಿವೆ. ನಿರಂತರ ವ್ಯವಹಾರ ಇದೇ ಸಂಘಗಳಿಂದ ನಡೆದಲ್ಲಿ ರೈತರ ಅಭ್ಯುದಯ ಹಾಗು ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಕಾರಣವಾಗಲಿದೆ ಎಂದರು.

ಉಪಾಧ್ಯಕ್ಷ ಸದಾಶಿವ ಮಾಂಗ, ಆನಂದ ಕಂಪು, ಗ್ರಾಮ ಪಂಚಾಯತ್ ಅಧ್ಯಕ್ಷ ಮಹಾದೇವ ಮೋಪಗಾರ, ಬಸಪ್ಪ ಝುಳಕಿ, ಗುರುಪಾದ ಕಿತ್ತೂರ, ಮಲ್ಲಪ್ಪ ಹುಣಸಿಕಟ್ಟಿ, ಪರಪ್ಪ ಗಲಗಲಿ, ಗುರುಪಾದ ಮೋಪಗಾರ, ಬಸವರಾಜ ಪಾಟೀಲ, ಕರೆಪ್ಪ ಅಮ್ಮಜವ್ವಗೋಳ, ಗಿರಮಲ್ಲಪ್ಪ ಹಳಮನಿ, ಶ್ರೀಮತಿ ಭಾಗವ್ವ ಮಠಪತಿ, ಶ್ರೀಮತಿ ಶಾರದಾ ಮಗದುಮ್, ಸದಾಶಿವ ಘಾಟನವರ, ಮಹೇಶ ಪಾಟೀಲ, ಮುಖ್ಯ ಕಾರ್ಯನಿರ್ವಾಹಕ ಎಂ. ಕೆ. ಸಂತಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಯುವ ರೈತ ಸಂಗಮೇಶ ಬಿಜಾಪುರಗೆ ವಿಜಯಪುರ ರತ್ನ ಪ್ರಶಸ್ತಿ ವಿತರಣೆ



**ಕೊಲ್ಹಾರ :** ತಾಲೂಕಿನ ಮುಳವಾಡ ಗ್ರಾಮದ ಯುವ ರೈತ ಸಂಗಮೇಶ ಬಿಜಾಪೂರವರು ಸಾವಯವ ಕೃಷಿ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಗುರ್ತಿಸಿ ವಿಜಯಪುರ ಗಜಾನನ ಉತ್ಸವ ಮಹಾಮಂಡಲದವರು ವಿಜಯಪುರ ರತ್ನ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ವಿಜಯಪುರ ನಗರದ ಛತ್ರಪತಿ ಶಿವಾಜಿ ಮಹಾರಾಜರ ವೃತ್ತದಲ್ಲಿ ಗಜಾನನ ಉತ್ಸವ ಮಹಾಂಡಲ ವತಿಯಿಂದ ಹಮ್ಮಿಕೊಂಡ ವಿಜಯಪುರ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ,ಮಾಜಿ ಕೇಂದ್ರ ಮಂತ್ರಿ ಹಾಗೂ ಸಂಸದ ರಮೇಶ ಜಿಗಜಿಣಗಿ, ಜಂಟಿ ಕೃಷಿ ನಿರ್ದೇಶಕ ರಾಜಶೇಖರ ವಿಲಿಯಮ್ಸ್ ಕೃಷಿ ಅಧಿಕಾರಿ ಲಿಂಗರಾಜ ತಾಳಿಕೋಟಿ,ಮುಖಂಡ ಜಗದೀಶ ಮುಚ್ಚಂಡಿ, ವಿಜಯ ಕರ್ನಾಟಕ ಜಿಲ್ಲಾ ವರದಿಗಾರ ಸಂಗಮೇಶ ಚೂರಿ ಸೇರಿದಂತೆ ಅನೇಕರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಪ್ರಶಸ್ತಿ ಸ್ವೀಕರಿಸಿ ಸಂಗಮೇಶ ಬಿಜಾಪೂರ ಮಾತನಾಡಿ,ಮುಳವಾಡ ಗ್ರಾಮದಲ್ಲಿ ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಕೃಷಿ ಮಾಡುತ್ತೀರುವುದನ್ನು ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ವಿಜಯಪುರ ಗಜಾನನ ಉತ್ಸವ ಮಹಾಮಂಡಲದ ಪಧಾಧಿಕಾರಿಗಳು ನನ್ನ ಸಾಧನೆಯನ್ನು ಗುರ್ತಿಸಿ ವಿಜಯಪುರ ರತ್ನ ಪ್ರಶಸ್ತಿ ನೀಡಿದ್ದಕ್ಕಾಗಿ ಎಲ್ಲರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

# ರೈತಸಿರಿ ರೈತರಿಗೆ ಕಾಮಧೇನು ಕಲ್ಪವೃಕ್ಷವಾಗಲಿ: ಸಚಿವ ಪಾಟೀಲ



**ಬಸವನಬಾಗೇವಾಡಿ :** ರೈತರು ಪ್ರತಿಯೊಬ್ಬರ ಹಸಿವನ್ನು ನೀಗಿಸುವ ಮೂಲಕ ದೇಶಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ರೈತರ ಬದುಕು ಹಸನಾಗುವಂತೆ ಮಾಡಲು ರೈತಸಿರಿ ರೈತರಿಗೆ ಕಾಮದೇನು ಕಲ್ಪವೃಕ್ಷವಾಗಲಿ ಎಂದು ರಾಜ್ಯ ಸಕ್ಕರೆ, ಜವಳಿ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದಲ್ಲಿ ನೂತನವಾಗಿ ಕಾರ್ಯಾರಂಭ ಮಾಡುತ್ತಿರುವ ರೈತಸಿರಿ ಸೌಹಾರ್ದ ಸಹಕಾರಿ ಸಂಘ ನಿ.. ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಕೃಷಿ ಅವಲಂಬಿತ ರೈತರು ಕೃಷಿ ಭೂಮಿಯ ಕುರಿತು ಹೆಚ್ಚಿನ ಅಧ್ಯಯನ ಮಾಡಿ ಕೃಷಿ ಚಟುವಟಿಕೆ ಕಾರ್ಯಾರಂಭ ಮಾಡುವದರ ಜೊತೆಗೆ ಮಿತವಾಗಿ ರಾಸಾಯನಿಕ ಗೊಬ್ಬರ ಹಾಗೂ ಹೆಚ್ಚಿನ ಪ್ರಮಾಣದ ಸಾವಯವ ಗೊಬ್ಬರವನ್ನು ಬಳಕೆ ಮಾಡುವದರೊಂದಿಗೆ ವೈಜ್ಞಾನಿಕ ಕೃಷಿ ಪದ್ದತಿಯನ್ನು ರೂಡಿಸಿಕೊಂಡಲ್ಲಿ ಒಂದು ಬೆಳೆ ಕೈಕೊಟ್ಟಲ್ಲಿ ಇನ್ನೊಂದು ಬೆಳೆಯಿಂದ ಹೆಚ್ಚಿನ ಆದಾಯ ಪಡೆಯಬಹುದಾಗಿದೆ ಎಂದರು.

ರಾಜ್ಯದಲ್ಲಿ ಕ್ಷೀರ ಕ್ರಾಂತಿಯಾಗುತ್ತಿರುವದರಿಂದ ಗ್ರಾಮೀಣ ಪ್ರದೇಶದಲ್ಲಿ ನೀರಿಗಿಂತ ಹಾಲಿನ ಬೆಲೆ ಕಡಿಮೆಯಾಗುತ್ತಿರುವದು ರೈತನ ಕೊಡುಗೆಯಾಗಿದೆ. ದೇಶದಲ್ಲಿ ಹಾಲು ಉತ್ಪಾದನೆಯಲ್ಲಿ ವಿಜಯಪುರ ಜಿಲ್ಲೆ ಮೂರನೇ ಸ್ಥಾನದಲ್ಲಿದೆ. ಕ್ಷೀರ ಕ್ರಾಂತಿಯಿಂದ ಜಿಲ್ಲೆಯಲ್ಲಿ ಸಾಕಷ್ಟು ಬದಲಾವಣೆ ಕಂಡಿದೆ. ರಾಜ್ಯ ಸರ್ಕಾರ ರೈತರ ಅನುಕೂಲಕ್ಕಾಗಿ 60-65ಲಕ್ಷ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುತ್ತಿರುವದು ದೇಶಕ್ಕೆ ಮಾದರಿಯಾಗಿದೆ ಎಂದರು.

ಯರನಾಳ ವಿರಕ್ತಮಠದ ಶ್ರೀ ಗುರು ಸಂಗನಬಸವ ಮಹಾಸ್ವಾಮಿಜಿಗಳು ಮಾತನಾಡಿ ಸಹಕಾರ ಸಂಘಗಳು ರೈತರ ಬದುಕನ್ನು ಹಸನಾಗುವಂತೆ ಮಾಡಿವೆ, ಗುಜರಾತ ರಾಜ್ಯದಲ್ಲಿ ನೀರಾವರಿ ಪ್ರದೇಶ ಹೊಂದಿಲ್ಲವಾದರು ದೇಶದಲ್ಲಿಯೇ ಹೈನುಗಾರಿಕೆಗೆ ಪ್ರಸಿದ್ದಿ ಪಡೆದಿದೆ. ಆದರೆ ನಮ್ಮ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳು ಸ್ವಲ್ಪ ಪ್ರಮಾಣದಲ್ಲಿ ಇದೆ. ಅದಕ್ಕೆ ತಾವು ಕೂಡಾ ಹೈನುಗಾರಿಕೆಯನ್ನು ಕಷ್ಟ ಪಟ್ಟು ಮಾಡಿದರೆ ದೇಶದಲ್ಲಿಯೇ ನಂ 1 ಹೈನುಗಾರಿಕೆ ಜಿಲ್ಲೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಭವಿಷ್ಯದಲ್ಲಿ ರೈತಸಿರಿ ಉತ್ತರೋತ್ತರವಾಗಿ ಬೆಳೆದು ರಾಜ್ಯಕ್ಕೆ ಮಾದರಿಯಾಗಿ ಬೆಳಗಲಿ ಎಂದು ಆಶೀರ್ವದಿಸಿದರು. ವಿಡಿಸಿಸಿ ಬ್ಯಾಂಕ ನಿರ್ದೇಶಕ ಚಂದ್ರಶೇಖರಗೌಡ ಪಾಟೀಲ, ರೇವಣಸಿದ್ದ ಮಣೂರ, ವಿಠ್ಠಲ ಸಿಂದೆ ಮಾತನಾಡಿದರು. ಈ ಸಂದರ್ಭದಲ್ಲಿ ಬಸನಗೌಡ ಲಿಂಗದಳ್ಳಿ, ರವಿಗೌಡ ಪಾಟೀಲ, ಶಿವನಗೌಡ ಗುಜಗೊಂಡ, ಎಸ್.ಎಸ್.ತಳೇವಾಡ, ಸುರೇಶ ಹಾರಿವಾಳ, ಪಾಂಡಪ್ಪ ಔರಸಂಗ, ಭೀಮಗೊಂಡ ಹತ್ತರಕಿ, ಮೋದಿಲಾಲ ಕೋರಬು, ಬಾಬುಗೌಡ ಪಾಟೀಲ, ರಾಮಣ್ಣ ಒಂಟಗೋಡಿ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಶಬ್ಬೀರ ರೇವುರಕರ ಸೇರಿದಂತೆ ಇತರರು ಇದ್ದರು. ರೈತಸಿರಿ ಸೌಹಾರ್ದ ಸಹಕಾರ ಸಂಘ ನಿ..ಅಧ್ಯಕ್ಷ ಭಾಗ್ಯರಾಜ ಸೊನ್ನದ ಸ್ವಾಗತಿಸಿದರು, ಸಂಗಮೇಶ ಗೆಣ್ಣೂರ ನಿರೂಪಿಸಿದರು.ಸಂಗಮೇಶ ಸಾತಲಗಾವಿ ವಂದಿಸಿದರು.

# ಮನಗೂಳಿ ಪಟ್ಟಣ ಅಭಿವೃದ್ಧಿ ಪಥದತ್ತ ಸಾಗುತ್ತಿದೆ: ಸಚಿವ ಶಿವಾನಂದ ಪಾಟೀಲ

**ಬಸವನಬಾಗೇವಾಡಿ :** ಮತಕ್ಷೇತ್ರದ ಮನಗೂಳಿ ಪಟ್ಟಣ ಸರ್ವಾಂಗೀಣ ಅಭಿವೃದ್ಧಿ ಹೊಂದುವ ಮೂಲಕ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಭಾನುವಾರ ಸಂಜೆ ಪಟ್ಟಣ ಪಂಚಾಯಿತಿ ಘನತ್ಯಾಜ್ಯ ವಾಹನ ಮತ್ತು ಪಟ್ಟಣದಲ್ಲಿ ಪಟ್ಟಣ ಪಂಚಾಯಿತಿಯಿಂದ ಅಳವಡಿಸಲಾಗಿರುವ ಸಿಸಿ ಕ್ಯಾಮರಾ ಕಾಮಗಾರಿ, ನವೀಕರಿಸಲಾದ ಪಂಚಾಯಿತಿಯ ಸಭಾಭವನವನ್ನ ಉದ್ಘಾಟಿಸಿ ಮಾತನಾಡಿದ ಅವರು ಮನಗೂಳಿ ಪಟ್ಟಣದಲ್ಲಿ ಸರ್ಕಾರಿ ಡಿಗ್ರಿ ಕಾಲೇಜು, ವಿದ್ಯಾರ್ಥಿ ನಿಲಯ ಸೇರಿದಂತೆ ಸಾಕಷ್ಟು ಸರ್ಕಾರಿ ಕಟ್ಟಡಗಳು ತಲೆ ಎತ್ತಿದ್ದು ಹಿಂದೆಂದು ಕಾಣದ ರೀತಿಯಲ್ಲಿ ಪಟ್ಟಣ ಅಭಿವೃದ್ಧಿ ಹೊಂದುತ್ತಿದೆ ಕ್ಷೇತ್ರದ ಜನರ ಸಹಾಯ ಸಹಕಾರದಿಂದ ಬಸವನಬಾಗೇವಾಡಿ ಮತಕ್ಷೇತ್ರ ಸರ್ವಾಂಗೀಣ ಅಭಿವೃದ್ಧಿ ಹೊಂದುವ ಮೂಲಕ ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವಾಗಿ ಹೊರ ಹೊಮ್ಮುತ್ತಿದೆ ಎಂದರು.

ಪಟ್ಟಣ ಪಂಚಾಯತ್ ಮುಖ್ಯಧಿಕಾರಿ ಶಬ್ಬೀರ ರೇವುಡಕರ ಮಾತನಾಡಿ ಮನಗೂಳಿ ಪಟ್ಟಣದಲ್ಲಿ ಉಕ್ಕಲಿಕ್ರಾಸ್,ಡಾ,ಬಿ,ಆರ್ ಅಂಬೇಡ್ಕರವೃತ್ತ,ಅಬ್ದುಲ್ ಕಲಾಂ ವೃತ್ತ, ಸೋಮೇಶ್ವರ ಭಜನಾ ಮಂಟಪದ ಹತ್ತಿರಮ ಹೊಸ ಬಸ್‌ಸ್ಟ್ಯಾಂಡ್,ಟಿಪ್ಪುಸುಲ್ತಾನ ವೃತ್ತ, ಪೊಲೀಸ ಸ್ಟೇಶನ್, ರಾಣಿ ಚನ್ನಮ್ಮಾ ವೃತ್ತ, ಶಿವಾಜಿ ವೃತ್ತ, ಅಗಸಿ ಹತ್ತಿರ ಸೇರಿದಂತೆ ಒಟ್ಟು 11 ಕಡೆಗಳಲ್ಲಿ ಸಿಸಿ ಕ್ಯಾಮರಾಗಳನ್ನ ಅಳವಡಿಸಲಾಗಿದೆ, ಅಲ್ಲದೇ ಕ್ಯಾಮರಾದೊಂದಿಗೆ ಸೌಂಡ್ ವ್ಯವಸ್ಥೆ ಕಲ್ಪಿಸಲಾಗಿದೆ ಇದರ ಮೂಲಕ ನೇರವಾಗಿ ಪಂಚಾಯಿತಿಯಂದಲೇ ಮಾಹಿತಿಯನ್ನ ರವಾನಿಸಬಹುದಾಗಿದೆ, ಅಲ್ಲದೇ ಪಟ್ಟಣ ಪಂಚಾಯಿತಿಯಲ್ಲಿನ ಸಭಾಭವನವನ್ನ ನವೀಕರಿಸಲಾಗಿದೆ ಎಂದರು.

ಈ ಸಂಧರ್ಭದಲ್ಲಿ ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ, ಕಾಂಗ್ರೆಸ್ ಉಪಾಧ್ಯಕ್ಷ ಶಿವನಗೌಡ ಗುಜಗೊಂಡ, ತಾಲೂಕಾ ಅಧ್ಯಕ್ಷ ಸುರೇಶ ಹಾರಿವಾಳ, ಮುಖಂಡರಾದ ಭಾಗ್ಯರಾಜ ಸೊನ್ನದ, ಅಜೀತ್ ಜಾನಕರ, ಸೇರಿದಂತೆ ಮುಂತಾದವರು ಇದ್ದರು.

# ಸರ್ವಜ್ಞ ವಿದ್ಯಾಪೀಠ ಶಾಲೆಯ ವಿದ್ಯಾರ್ಥಿಗಳು ವ್ಹಾಲಿಬಾಲ್‌ದಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ

**ತಾಳಿಕೋಟೆ :** ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪ್ರೌಢಶಾಲೆಯ ವಿದ್ಯಾರ್ಥಿಗಳು ಘಾಳಪೂಜಿಯ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದ ಮುದ್ದೇಬಿಹಾಳ ತಾಲೂಕ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿವಿಧ ಕ್ರೀಡೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ವೈಯಕ್ತಿಕ ಸ್ಪರ್ಧೆಯಲ್ಲಿ ಸಚಿನ ಜಂಬಗಿ (ಗುಂಡು ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ), ಮಹೇಶ ತಳವಾರ (ಎತ್ತರ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ), ಅನಿಲ ಗುಂಡಳ್ಳಿ (200 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ), ಸಚಿನ ಜಂಬಗಿ ಬಲ್ಲೇ ಎಸೆತದಲ್ಲಿ ತೃತೀಯ ಸ್ಥಾನ), ಪಡೆದುಕೊಂಡಿದ್ದಾರೆ.

ಗುಂಪು ಆಟಗಳ ಸ್ಪರ್ಧೆಯಾದ ವ್ಹಾಲಿಬಾಲ್ ಪಧ್ಯದಲ್ಲಿ ಕುಮಾರ ರೋಷನ್ ಕಾಳಗಿ ತಂಡ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪ್ರೌಢಶಾಲೆಯ ವಿದ್ಯಾರ್ಥಿಗಳು, ಇಂದಿರಾ ಗಾಂಧಿ ಮುರಾರ್ಜಿ ದೇಸಾಯಿ ವಸತಿ ಶಾಲೆ ತಮ್ಮದಡ್ಡಿ ಶಾಲೆಯ ವಿದ್ಯಾರ್ಥಿಗಳನ್ನು ಫೈನಲ್ ಪಂದ್ಯದಲ್ಲಿ ಹತ್ತು ಅಂಕಗಳಿಂದ ಸೋಲಿಸಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಆಯ್ಕೆಯಾದ ಎಲ್ಲಾ ವಿದ್ಯಾರ್ಥಿಗಳಿಗೆ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ, ಮುಖ್ಯ ಗುರುಗಳಾದ ಸಂತೋಷ ಪವಾರ, ದೈಹಿಕ ಶಿಕ್ಷಕರಾದ ಬಸವರಾಜ ಚಳ್ಳಗಿ, ಶಾಂತಗೌಡ ಬಿರಾದಾರ, ಶಿಕ್ಷಕರಾದ ರಾಜು ಜವಳಗೇರಿ, ಎಂ.ಬಿ. ಹಿರೇಗೌಡರ, ಭೀಮನಗೌಡ ಸಾಸನೂರ, ಬಸವರಾಜ ತಳವಾರ, ವಿಜಯಕುಮಾರ ಹಳಿಯಾಳ, ರಸೂಲಸಾ ತುರ್ಕಣಿಗೇರಿ, ಸಿದ್ದನಗೌಡ ಚೌದರಿ, ಶರಣಗೌಡ ಕಾಚಾಪುರ, ಸಂಜುಕುಮಾರ ಭಜಂತ್ರಿ, ರಮೇಶ ಪಾಸೋಡಿ,ರೂಪಾ ಪಾಟೀಲ,ಶಿವಲೀಲಾ ಚುಂಚನೂರ, ಪುಷ್ಪ ನಾಡಗೌಡ, ಪಲ್ಲವಿ ಕಸ್ತೂರಿ, ಲಕ್ಷ್ಮಿ ಚುಂಚುರ, ದೇವೇಂದ್ರ ಗುಳೆದ, ಅನಿತಾ ಚೌದ್ರಿ, ಅಂಬುಜಾ ಹಜೇರಿ, ರಾಣಿ, ರಾಜಬಿ ಬಿದರಿ, ಪುಷ್ಪ ನಾಡಗೌಡರ, ಕಲ್ಪನಾ ಹಜೇರಿ, ಪಲ್ಲವಿ ಕಸ್ತೂರಿ, ನಾಗರತ್ನ ಮೈಲೇಶ್ವರ, ಹೇಮಾ ಕೊಡೆಕಲ್, ನಾಗಶ್ರೀ ನಾಯಕ, ಶಂಕ್ರಮ್ಮ, ಮೇಘಾ ಪಾಟೀಲ, ಮುಬಿನ ಮುರಾಳ, ಅಭಿನಂದಿಸಿದ್ದಾರೆ.

# ಬಾಲಭವನ : ಕಚೇರಿ ಸಹಾಯಕರ ಹುದ್ದೆಗೆ ಅರ್ಜಿ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ಬಾಲಭವನದಲ್ಲಿ ಕಾರ್ಯನಿರ್ವಹಿಸಲು ಕಚೇರಿ ಸಹಾಯಕರ ಹುದ್ದೆಗೆ ಮಾಸಿಕ ಗೌರಧನದ 10 ಸಾವಿರ ರೂ.ಗಳ ಸಂಚಿತ ವೇತನದ ಆಧಾರದ ಮೇರೆಗೆ ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳಲು ಪಿಯುಸಿ ಮತ್ತು ಮೇಲ್ಪಟ್ಟ ವಿದ್ಯಾರ್ಹತೆಯೊಂದಿಗೆ ಕಂಪ್ಯೂಟರ ಜ್ಞಾನ ಹೊಂದಿರುವುದು ಕಡ್ಡಾಯವಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟೆ ಇವರಿಂದ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅಕ್ಟೋಬರ 1 ರಂದು ಸಂಜೆ 5.30 ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವಂತೆ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-297708, 235708ಗೆ ಸಂಪರ್ಕಿಸಬಹುದಾಗಿದೆ.

# ವಿಕಲಚೇತನರ ದಿನಾಚರಣೆ: ರಾಜ್ಯ ಪ್ರಶಸ್ತಿಗೆ ಅರ್ಜಿ

**ಬಾಗಲಕೋಟೆ :** ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ವಿಕಲಚೇತನರ ಸಬಲೀಕರಣಕ್ಕಾಗಿ ವ್ಯಯಕ್ತಿಕ ವಿಭಾಗ, ವಿಶೇಷ ಶಿಕ್ಷಕರ ವಿಭಾಗ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸಂಘ, ಸಂಸ್ಥೆಗಳಿಗೆ ಪ್ರತಿ ವರ್ಷವು ನೀಡುವ ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ನಿಗದಿತಅರ್ಜಿನಮೂನೆಯಲ್ಲಿಮಾಹಿತಿಯನ್ನುಭರ್ತಿಮಾಡಿ2ಪ್ರತಿಗಳಲ್ಲಿ ಪ್ರಸ್ತಾವನೆಗಳನ್ನು ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಅಕ್ಟೋಬರ 15 ರೊಳಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾಡಳಿತ, ಭವನ, ನವನಗರ ಬಾಗಲಕೋಟೆ ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂಸಂ.08354-220766 ಹಾಗೂ ಆಯಾ ತಾಲೂಕಿಮ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಅಧಿಕಾರಿ ಕೆ.ಮಹಾಂತೇಶ ತಿಳಿಸಿದ್ದಾರೆ.

# ಹೊಯ್ಸಳ, ಕೆಳದಿ ಚನ್ನಮ್ಮ ಪ್ರಶಸ್ತಿಗೆ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿಗೆ ಹೊಯ್ಸಳ ಮತ್ತು ಕೆಳದಿ ಚನ್ನಮ್ಮ ಪ್ರಶಸ್ತಿ ಯೋಜನೆಯಡಿ ನಾವಿನ್ಯತೆ, ತಾರ್ಕಿಕ ಸಾಧನೆ, ಕ್ರೀಡೆ, ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜಿಲ್ಲಾ ಮಟ್ಟದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ಕ್ಷೇತ್ರದಲ್ಲಿ ಇಬ್ಬರು ಮಕ್ಕಳಂತೆ ಒಟ್ಟು 8 ಮಕ್ಕಳನ್ನು ಆಯ್ಕೆ ಮಾಡಲಾಗುತ್ತಿದೆ. 5 ರಿಂದ 18 ವರ್ಷದೊಳಗಿದ್ದು, ಪ್ರತಿಭೆಯನ್ನು ಹೊಂದಿರುವ ಬಗ್ಗೆ ಪ್ರಮುಖ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರಬೇಕು. ಅಂತರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಬಗ್ಗೆ ಪ್ರಶಸ್ತಿ ಪತ್ರ ಅಥವಾ ಪ್ರಮಾಣ ಪತ್ರ ಲಗತ್ತಿಸಬೇಕು. ಹಿಂದಿನ ವರ್ಷ ಪ್ರಶಸ್ತಿ ಪಡೆದವರು ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುವದಿಲ್ಲ. ಪ್ರಶಸ್ತಿ ತಲಾ 10 ಸಾವಿರ ರೂ ನಗರದು ಹಾಗೂ ಪ್ರಮಾಣ ಪತ್ರ ಒಳಗೊಂಡಿದೆ. ಅರ್ಜಿಯನ್ನು ಅಕ್ಟೋಬರ 3 ರೊಳಗಾಗಿ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ನವನಗರ, ಬಾಗಲಕೋಟೆ ದೂಸಂ.08354-297708, 235708ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಗ್ಯಾರಂಟಿ ಯೋಜನೆಗಳ ಯಶೋಗಾಥೆಯನ್ನು ಜನತೆಗೆ ತಿಳಿಸಿ: ಅಧ್ಯಕ್ಷರಾದರೆಡ್ಡಿ ಶ್ರೀನಿವಾಸ ಸಲಹೆ



**ಕೊಪ್ಪಳ**ಕರ್ನಾಟಕರಾಜ್ಯದಲ್ಲಿಜಾರಿಗೊಳಿಸಿರುವ ಐದುಗ್ಯಾರಂಟಿ ಯೋಜನೆಗಳ ಬಗ್ಗೆ ಸಾರ್ವಜನಿಕರಿಂದಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.ಈಯೋಜನೆಗಳನ್ನುಯಶಸ್ವಿಯಾಗಿ ಅನುಷ್ಠಾನಗೊಳಿಸುವ ಮೂಲಕ ದೇಶದ ಏಕೈಕ ರಾಜ್ಯಎಂದುಕರ್ನಾಟಕ ಹೆಸರಾಗುತ್ತಿದೆಎಂದುಗ್ಯಾರಂಟಿಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಕೊಪ್ಪಳ ಜಿಲ್ಲಾಅಧ್ಯಕ್ಷರಾದರೆಡ್ಡಿ ಶ್ರೀನಿವಾಸ ಅವರುಹೇಳಿದರು.

ಜಿಲ್ಲಾ ಪಂಚಾಯತ್‌ನಜೆ. ಹೆಚ್.ಪಟೇಲ್‌ಸಭಾಂಗಣದಲ್ಲಿ ಸೆ.19ರಂದು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದಅವರು, ಮಾನ್ಯ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್‌ಅವರು ಈ ಯೋಜನೆಗಳ ಅನುಷ್ಠಾನದ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ ಅಧಿಕಾರಿಗಳಿಗೆ ಉತ್ತಮ ಮಾರ್ಗದರ್ಶನ ಮಾಡಿದ್ದರಿಂದಾಗಿಜಿಲ್ಲೆಯಲ್ಲಿಗ್ಯಾರಂಟಿ ಯೋಜನೆಗಳ ಅನುಷ್ಠಾನವು ತೃಪ್ತಿಕರವಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತುಸಂಬಂಧಿಸಿದ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಗೆ ತಾವುಅಭಿನಂದಿಸುವುದಾಗಿ ಹೇಳಿದರು. ಐದುಗ್ಯಾರಂಟಿ ಯೋಜನೆಗಳ ಯಶೋಗಾಥೆಯನ್ನುಜನತೆಗೆ ತಿಳಿಸಬೇಕು ಎಂದು ಸಲಹೆ ಮಾಡಿದರು.

ಗೃಹಲಕ್ಷ್ಮಿ ಯೋಜನೆಯು ಸರ್ಕಾರದ ಮಹತ್ವಕಾಂಕ್ಷೆಯ ಗ್ಯಾರಂಟಿ ಯೋಜನೆಗಳಲ್ಲಿ ಒಂದಾಗಿದೆ. ಕುಟುಂಬದಯಜಮಾನಿ ಆರ್ಥಿಕವಾಗಿ ಸಬಲೀಕರಣಗೊಂಡಲ್ಲಿಕುಟುಂಬದ ಸಮಗ್ರ ಅಭಿವೃದ್ದಿಯಿಂದ ಸಮಾಜದಅಭಿವೃದ್ದಿಗೆ ಬುನಾದಿಯಾಗಲಿದೆ. ಮಹಿಳಾ ಸಬಲೀಕರಣ ಹಾಗೂ ಸ್ವಾಭಿಮಾನದ ಹೆಗ್ಗುರುತಾಗಲಿದೆ. ಬಿಪಿಎಲ್, ಎಪಿಎಲ್‌ಅಂತ್ಯೋದಯ ಕಾರ್ಡನಲ್ಲಿ ನಮೂದಿಸಿರುವಂತೆ ಕುಟುಂಬ ಯಜಮಾನಿ ಮಹಿಳಾ ಫಲಾನುಭವಿಗಳಿಗೆ ಪ್ರತಿ ತಿಂಗಳು 2,000ಗಳನ್ನು ಡಿಬಿಟಿ ಮೂಲಕ ಪಾವತಿಸುವ ಕಾರ್ಯವು ಅಚ್ಚುಕಟ್ಟಾಗಿ ನಡೆಯಬೇಕುಎಂದುಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರಾಹುಲ್‌ರತ್ನಂ ಪಾಂಡೆಯಅವರು ಮಾತನಾಡಿ, ಈ ಯೋಜನೆಗಳ ಲಾಭವುಅರ್ಹ ಪ್ರತಿಯೊಬ್ಬ ಫಲಾನುಭವಿಗಳಿಗೆ ದೊರೆಯುವ ನಿಟ್ಟಿನಲ್ಲಿಜನತೆಗೆಜಾಗೃತಿ ಮೂಡಿಸಬೇಕು. ಈ ನಿಟ್ಟಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕೃಷಿ, ಆರೋಗ್ಯ, ಜಿಲ್ಲಾ ಪಂಚಾಯತ್ ಸೇರಿದಂತೆ ವಿವಿಧ ಇಲಾಖೆಗಳ ಅಧೀನದಲ್ಲಿಜಿಲ್ಲಾದ್ಯಂತ ಎಲ್ಲಾಕಡೆಗಿರುವ ಹೆದ್ದಾರಿ ಫಲಕಗಳಲ್ಲಿ ಯೋಜನೆಗಳ ಮಾಹಿತಿ ಅಳವಡಿಸಿ ಜಾಗೃತಿ ಮೂಡಿಸಬೇಕುಎಂದು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಕೊಪ್ಪಳ ಜಿಲ್ಲೆಯಲ್ಲಿಒಟ್ಟು 3,31,365 ಪಡಿತರಚೀಟಿಹೊಂದಿದ್ದು, ಅದರಲ್ಲಿ ಪರಿಶಿಷ್ಟ ಜಾತಿ-56,145, ಪರಿಶಿಷ್ಟ ಪಂಗಡ-35,479 ಇತರೆ-2,28,526 ಸೇರಿ3,20,150 (ಶೇ.96.61) ಫಲಾನುಭವಿಗಳು ಗೃಹಲಕ್ಷ್ಮಿಯೋಜನೆಯಡಿನೋಂದಣಿಯಾಗಿದಾರೆ. ಜೂನ್-2024ರ ಅಂತ್ಯಕ್ಕೆ 3,11,144 ಫಲಾನುಭವಿಗಳಿಗೆ ಹಣ ಪಾವತಿಯಾಗಿದೆ. ಇದುವರೆಗೆಒಟ್ಟು 640.31,26,000 ಕೋಟಿರೂ. ವೆಚ್ಚಭರಿಸಲಾಗಿದೆ.

ಜುಲೈ ಮತ್ತು ಆಗಸ್ಟ್-2024 ರ ಮಾಹೆಯ ಸಹಾಯಧನ ಪಾವತಿಯು ಪ್ರಕ್ರಿಯೆ ಹಂತದಲ್ಲಿರುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಕೊಪ್ಪಳ ಜಿಲ್ಲೆಯಲ್ಲಿಅಂತ್ಯೋದಯ 37377, ಬಿಪಿಎಲ್ 289,741ಸೇರಿದಂತೆಒಟ್ಟು3,27,118 ಪಡಿತರ ಚೀಟಿಗಳಿದ್ದುಅವುಗಳಲ್ಲಿನ 11,78,018 ಸದಸ್ಯರಿಗೆ ಸರ್ಕಾರದರಾಷ್ಟ್ರೀಯಆಹಾರ ಭದ್ರತಾಕಾಯ್ದೆಯಂತೆ ಪ್ರತಿ ಸದಸ್ಯರಿಗೆ 5 ಕೆ.ಜಿ. ಆಹಾರಧಾನ್ಯವನ್ನುಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

ರಾಜ್ಯ ಸರ್ಕಾರವುಅನ್ನಭಾಗ್ಯಯೋಜನೆಯಲ್ಲಿ ಹೆಚ್ಚುವರಿಯಾಗಿ ನೀಡುವ 5ಕೆ.ಜಿ ಅಕ್ಕಿ ಬದಲಿಗೆ ಪ್ರತಿ ಸದಸ್ಯರಿಗೆ 170ರೂಪಾಯಿ ನೀಡಲು ಘೋಷಿಸಿದಂತೆ ನೇರ ನಗದು ವರ್ಗಾವಣೆ ಮೂಲಕ (ಡಿ.ಬಿ.ಟಿ) ಹಣವನ್ನುಕುಟುಂಬದ ಮುಖ್ಯಸ್ಥರಖಾತೆಗೆ ನೇರವಾಗಿಜಮಾ ಮಾಡಲಾಗುತ್ತಿದೆ. ಈ ಯೋಜನೆಯು ಜುಲೈ-2023 ರಿಂದಜಾರಿಯಲ್ಲಿದ್ದು ಈ ವರೆಗೆ ಕೊಪ್ಪಳ ಜಿಲ್ಲೆಯಲ್ಲಿ 209.71 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಕಾರ್ಡುದಾರರಿಗೆ ವಿತರಿಸಲಾಗಿದೆಎಂದುಆಹಾರ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತ ನೀಡಿದರು.

ಶಕ್ತಿ ಯೋಜನೆಯುಜಿಲ್ಲೆಯಲ್ಲಿಉತ್ತಮವಾಗಿ ಅನುಷ್ಠಾನವಾಗುತ್ತಿದೆ. ಕೊಪ್ಪಳ, ಕುಷ್ಟಗಿ, ಯಲಬುರ್ಗಾ, ಗಂಗಾವತಿ ಮತ್ತುಕುಕನೂರ ಸೇರಿಜೂನ್ 23ರಿಂದ ಆಗಸ್ಟ್ 24ರವರೆಗೆ ಶಕ್ತಿ ಯೋಜನೆಯಡಿ 475.74 ಲಕ್ಷ ಮಹಿಳಾ ಪ್ರಯಾಣಿಕರು ಮತ್ತು 57.44 ಲಕ್ಷ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ ಎಂದುಕಲ್ಯಾಣಕರ್ನಾಟಕರಸ್ತೆಸಾರಿಗೆನಿಗಮದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

2023 ರಜುಲೈ 1 ರಿಂದ ಕೊಪ್ಪಳ ಜಿಲ್ಲೆಯಲ್ಲಿಗೃಹಜ್ಯೋತಿಯೋಜನೆಯನ್ನುಜಾರಿ ಮಾಡಲಾಗಿದ್ದು, ಜೂನ್ 30ರವರೆಗೆ ಕೊಪ್ಪಳ ಜಿಲ್ಲೆಯ 3,01,656 ವಿದ್ಯುತ್‌ಗ್ರಾಹಕರ ಪೈಕಿ 2,72,610 ಅರ್ಹಗ್ರಾಹಕರುಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದುಶೇ.96 ರಷ್ಟುಗ್ರಾಹಕರುಯೋಜನೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ಜೆಸ್ಕಾಂ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿಯುವನಿಧಿ ಯೋಜನೆಯಡಿ ಪದವೀಧರರಿಗೆ ಪ್ರತಿ ಮಾಹೆ 3,000ರೂ. ಮತ್ತುಡಿಪ್ಲೋಮಾ ಹೊಂದಿರುವವರಿಗೆ 1,500 ರೂ.ಮಾಸಿಕನಿರುದ್ಯೋಗಭತ್ಯೆನೀಡಲಾಗುತ್ತಿದೆ. ಸೇವಾಸಿಂಧು ಪೋರ್ಟಲ್ ಮೂಲಕ ಒಟ್ಟು 4,920 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದುಆಗಸ್ಟ್ ಮಾಹೆವರೆಗೆ3,819 ಫಲಾನುಭವಿಗಳಿಗೆ 1,14,22,500 ರೂಗಳ ನಿರುದ್ಯೋಗ ಭತ್ಯೆಯನ್ನು ಪಾವತಿ ಮಾಡಲಾಗಿದೆಎಂದುಜಿಲ್ಲಾಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಎಲ್ಲ ಉಪಾಧ್ಯಕ್ಷರು, ಸದಸ್ಯರು ಮತ್ತುಇನ್ನಿತರ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೇವಾದೇವಿ, ಗಿರವಿದಾರರ ಲೈಸನ್ಸ್ ಮುಟ್ಟುಗೋಲಿಗೆ ಕ್ರಮ

**ಬಾಗಲಕೋಟೆ :** ಕರ್ನಾಟಕ ಲೇವಾದೇವಿದಾರರ 1961, ಅಧಿನಿಯಮ 7, 10ರಡಿ ಜಿಲ್ಲೆಯ ಲೇವಾದೇವಿ, ಹಣಕಾಸು ಸಂಸ್ಥೆ ಹಾಗೂ ಗಿರಿವಿದಾರರು ಸೇರಿ 16 ಸಂಸ್ಥೆಗಳಿಗೆ ಪರವಾನಿಗೆ ಅವಧಿ ಮುಗಿದು ನವೀಕರಿಸುವಂತೆ ನೋಟಿಸ್ ನೀಡಿದರು ಪ್ರಸ್ತಾವಣೆ ಸಲ್ಲಿಸಿರುವದಿಲ್ಲ. ಆದ್ದರಿಂದ ತಾವುಗಳು ಇಟ್ಟಂತ ಭದ್ರತಾ ಠೇವಣಿ ಹಣವನ್ನು ಕಲಂ 7ಬಿ ಅಡಿ ಸರಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ಹೊರಡಿಸಬಾರದು ಎಂಬುದಕ್ಕೆ ತಕರಾರು ಇದ್ದಲ್ಲಿ ಪ್ರಕಟಣೆಗೊಂಡ 7 ದಿನಗಳಲ್ಲಿ ಖುದ್ದು ಹಾಜರಾಗಿ ಸಹಕಾರ ಸಂಘಗಳ ಉಪನಿಬಂಧಕರು, ಬಾಗಲಕೋಟೆ ಇವರಿಗೆ ಸಲ್ಲಿಸಬೇಕು. ತಲ್ಲಿದಲ್ಲಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಸಹಕಾರ ಸಂಘಗಳ ಉಪನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಾಜಿ ಫೈನಾನ್ಸ್ ಕಾರ್ಪೋರೇಷನ್ ಕಟಗೇರಿ, ಸಾಯಿರಾಮ ಫೈನಾನ್ಸ್ ಗುಳೇದಗುಡ್ಡ ಬಾದಾಮಿ, ಹುಲುಗೆಮ್ಮದೇವಿ ಫೈನಾನ್ಸ ಕಾರ್ಪೋರೇಷನ್ ನೀಲಗುಂದ, ಚಂದಾಲಿಂಗೇಶ್ವರ ಫೈನಾನ್ಸ್ ಕಾರ್ಪೋರೇಷನ್ ಹೆಬ್ಬಳ್ಳಿ, ಸಿದ್ದೇಶ್ವರ ಫೈನಾನ್ಸ ಕಾರ್ಪೋರೇಷನ್ ಕೆರೂರ, ಲಕ್ಷ್ಮೀ ಫೈನಾನ್ಸ್ ಕಾರ್ಪೋರೇಷನ್ ಹೊಸೂರ, ವೀರಭದ್ರೇಶ್ವರ ಫೈನಾನ್ಸ್ ಕಾರ್ಪೋರೇಷನ್ ಕೆರೂರ, ಕನ್ನಿಕಾ ಪರಮೇಶ್ವರಿ ಫೈನಾನ್ಸ್ ಕಾರ್ಪೋರೇಷನ್ ಕೆರೂರ, ಶಾಖಾಂಬರಿ ಫೈನಾನ್ಸ್ ಕಾರ್ಪೋರೇಷನ್ ಕೆರೂರ, ಶಾಂಭವಿ ಫೈನಾನ್ಸ್ ಕಾರ್ಪೋರೇಷನ್ ಬಾದಾಮಿ, ಶ್ರೀನಿವಾಸ ಫೈನಾನ್ಸ್ ಕಾರ್ಪೋರೇಷನ್ ಕೆರೂರ, ಸ್ವರ್ಣಗೌರಿ ಲೇವಾದೇವಿಗಾರರು & ಗಿರವಿದಾರರು ಬಾದಾಮಿ, ವಾಸಗಿ ಫೈನಾನ್ಸ್ ಕಾರ್ಪೋರೇಷನ್ ಕೆರೂರ, ಕಾಮಧೇನು ಫೈನಾನ್ಸ ಫೈನಾನ್ಸ್ ಕೆರೂರ, ಗುಳೇದಗುಡ್ಡ ಗೋಲ್ಡ ಫೈನಾನ್ಸ್ ಗುಳೇದಗುಡ್ಡ, ಮಂಜುನಾಥ ಫೈನಾನ್ಸ್ ಬಾದಾಮಿ.

# ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿಗಾಗಿ ಅರ್ಜಿ

**ಬಾಗಲಕೋಟೆ :** ಪ್ರಸಕ್ತ ಸಾಲಿನಲ್ಲಿ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುವ ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿ ಪಡೆಯಲು ಜಿಲ್ಲೆಯಲ್ಲಿರುವ ಕನಿಷ್ಟ 20ಕ್ಕಿಂತ ಹೆಚ್ಚು ಕುರಿ, ಮೇಕೆಗಳನ್ನು ಹೊಂದಿರುವ ಅರ್ಹ ಸಂಚಾರಿ ಕುರುಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ನಮೂನೆಯನ್ನು ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆಯಿಂದ ಪಡೆದು ವಲಸೆ ಹೋಗುವುದಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ಗ್ರಾಮ ಲೆಕ್ಕಾಧಿಕಾರಿಗಳಿಂದ ಮಹಜರ್ ಪ್ರಮಾಣ ಪತ್ರ ಪಡೆದು ಸೂಕ್ತ ದಾಖಲೆಗಳೊಂದಿಗೆ ಅರ್ಜಿಗಳನ್ನು ಭರ್ತಿ ಮಾಡಿ ಆಯಾ ತಾಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು, ಪಶು ಆಸ್ಪತ್ರೆ ಕಚೇರಿಗೆ ಸಲ್ಲಿಸುವಂತೆ ರಾಜ್ಯ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಪಶು ಆಸ್ಪತ್ರೆ ಸಂಪರ್ಕಿಸಬಹುದಾಗಿದೆ.

# ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿಗಾಗಿ ಅರ್ಜಿ ಆಹ್ವಾನ

**ಬೆಳಗಾವಿ :** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಸಂಚಾರಿ ಕುರಿಗಾರರಿಗೆ ಗುರುತಿನ ಚೀಟಿ ನೀಡಲು ಜಿಲ್ಲೆಯಲ್ಲಿರುವ ಅರ್ಹ ಸಂಚಾರಿ ಕುರಿಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಕನಿಷ್ಠ 20 ಕ್ಕಿಂತ ಹೆಚ್ಚು ಕುರಿ ಹಾಗೂ ಮೇಕೆಗಳನ್ನು ಹೊಂದಿರು ಸಂಚಾರಿ ಕುರಿಗಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಪಶು ಚಿಕಿತ್ಸಾಲಯ, ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆಗಳ ಪಶು ವೈದ್ಯಾಧಿಕಾರಿಗಳು ಅಥವಾ ಮುಖ್ಯ ಪಶು ವೈದ್ಯಾಧಿಕಾರಿಗಳನ್ನು ಕಛೇರಿಯಿಂದಅರ್ಜಿಪಡೆದುಭರ್ತಿಮಾಡಿಸೂಕ್ತದಾಖಲಾತಿಗಳೊಂದಿಗೆ ಅರ್ಜಿಯನ್ನು ಕಛೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಉಪನಿರ್ದೇಶಕರ ಕಛೇರಿಯ ದೂರವಾಣಿ:0831-2431294 ಸಂಖ್ಯೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹದಾಯಿ ಯೋಜನೆ ಅನುಷ್ಠಾನಕ್ಕೆ ಪ್ರವೀಣ್ ಶೆಟ್ಟಿ ಆಗ್ರಹ



**ಹುಬ್ಬಳ್ಳಿ :** ಮಹದಾಯಿ ಯೋಜನೆ ಅನುಷ್ಠಾನ ಮಾಡುವ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಈ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಗದಗ ಜಿಲ್ಲೆಯ ನರಗುಂದದಿಂದ ಗದಗ ಜಿಲ್ಲಾಧಿಕಾರಿ ಕಚೇರಿಯವರೆಗೆ ಪಾದಯಾತ್ರೆ ಕೈಗೊಂಡಿದ್ದೇವೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಪ್ರವೀಣ್ ಶೆಟ್ಟಿ ಹೇಳಿದರು.

ಗದಗ ಜಿಲ್ಲೆಯ ನರಗುಂದಕ್ಕೆ ತೆರಳುವ ಮುನ್ನ ಹುಬ್ಬಳ್ಳಿಯ ಚೆನ್ನಮ್ಮ ವೃತದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಮೂರ್ತಿಗೆ ತಮ್ಮ ಸಂಘಟನೆಯ ಪ್ರಮುಖರು ಸೇರಿ ಕಾರ್ಯಕರ್ತರೊಂದಿಗೆ ಮಾಲಾರ್ಪಣೆ ಮಾಡಿದ ಬಳಿಕ ಮಾಧ್ಯಮಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಮಹದಾಯಿ ಯೋಜನೆಗಾಗಿ ಈ ಭಾಗದ ಅನ್ನದಾತರು ಸುಮಾರು ಐದು ದಶಕಗಳಿಂದ ಹೋರಾಟ ಮಾಡುತ್ತಿದ್ದಾರೆ. ಆದರೆ ನಿದ್ದೆಯಲ್ಲಿರೋ ಸರ್ಕಾರಗಳಿಗೆ ಅನ್ನದಾತರ ಹಾಗೂ ಈ ಭಾಗದ ಜನರ ಕೂಗು ಕೇಳುತ್ತಿಲ್ಲ. ಹಾಗಾಗಿ ನಾವು ಕೂಡಾ ಮಹದಾಯಿ ಹೋರಾಟಕ್ಕೆ ಅನ್ನದಾತರೊಂದಿಗೆ ಕೈ ಜೋಡಿಸುವ ನಿಟ್ಟಿನಲ್ಲಿ ಗದಗ ಜಿಲ್ಲಾ ಕಚೇರಿಯವರೆಗೆ ಪಾದಯಾತ್ರೆ ಮಾಡುತ್ತಿದ್ದೇವೆ. ಮಹದಾಯಿ ಯೋಜನೆ ಅನುಷ್ಠಾನಕ್ಕೆ ಶೀಘ್ರ ಕ್ರಮ ಕೈಗೊಳ್ಳಲು ಗದಗ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮನವಿ ಸಲ್ಲಿಸುತ್ತೇವೆ ಎಂದರು.

ಶಾಸಕರು ಹಾಗೂ ಎಂಪಿಗಳು ಮಹದಾಯಿ ಯೋಜನೆ ಅನುಷ್ಠಾನಕ್ಕೆ, ತಮ್ಮ ಎಲ್ಲಾ ಪ್ರತಿಷ್ಠೆ, ರಾಜಕೀಯ ಪಕ್ಕಕ್ಕೆ ಇಟ್ಟು, ಯೋಜನೆ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ಕೇಂದ್ರ ಸರ್ಕಾರ ಮಹದಾಯಿ ವಿಚಾರದಲ್ಲಿ ಮಲತಾಯಿ ಧೋರಣೆ ಮಾಡುವುದನ್ನು ಬಿಟ್ಟು, ರಾಜ್ಯದ ಜನರ ಹಿತ ಕಾಪಾಡುವ ನಿಟ್ಟಿನಲ್ಲಿ ಮಹದಾಯಿ ಯೋಜನೆ ಅನುಷ್ಠಾನಕ್ಕೆ ಬೇಕಾಗಿರೋ ಕ್ಲಿಯರೆನ್ಸ್ ನೀಡಬೇಕು. ಇಲ್ಲವಾದಲ್ಲಿ ನಮ್ಮ ಹೋರಾಟವನ್ನು ಮತ್ತಷ್ಟು ಚುರುಕುಗೊಳಿಸುವ ಮೂಲಕ ಈ ಎರಡೂ ಸರ್ಕಾರಗಳಿಗೆ ಬಿಸಿ ಮುಟ್ಟಿಸುತ್ತೇವೆ.

ಮಹದಾಯಿ ಯೋಜನೆ ಅನುಷ್ಠಾನದ ಕರವೇ ಪ್ರವೀಣ್ ಶೆಟ್ಟಿ ಬಣದ ಹೋರಾಟಕ್ಕೆ 50ಕ್ಕೂ ಹೆಚ್ಚು ಆಟೋಗಳು ಸಾಥ್ ನೀಡಿ, ನರಗುಂದದ ಕಡೆ ತೆರಳಿದವು.

## ಬಿಮ್ಸ್‌ನಲ್ಲಿ ಹೊಸ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ: ಪ್ರವೇಶಕ್ಕೆ ಅವಕಾಶ

**ಬೆಳಗಾವಿ :** ವೈದ್ಯಕೀಯ ವಿಜ್ಞಾನ ಸಂಸ್ಥೆ(ಬಿಮ್ಸ್)ನಲ್ಲಿ ಪ್ರಸಕ್ತ 2024–25 ರ ಸಾಲಿನಲ್ಲಿ ಹೊಸದಾಗಿ ಪ್ಯಾರಾ ಮೆಡಿಕಲ್ ಕೋರ್ಸುಗಳಾದ ಡಯಾಲಿಸಿಸ್ ಇನ್ ಟೆಕ್ನಾಲಜಿ ಮತ್ತು ಆಪರೇಷನ್ ಥೇಟ–ರ್ ಹಾಗೂ ಅನಸ್ಥೇಶಿಯಾ ಟೆಕ್ನಾಲಜಿಯನ್ನು ಪ್ರಾರಂಭಿಸಲಾಗುತ್ತಿದೆ.

ಈಗಾಗಲೇ ಪ್ಯಾರಾ ಮೆಡಿಕಲ್ ಬೋರ್ಡ್‌ನಲ್ಲಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ S.S.L.C/P.U.C (ವಿಜ್ಞಾನ ವಿಭಾಗದ) ಅಭ್ಯರ್ಥಿಗಳು ಆಯ್ಕೆ ಪ್ರಕ್ರಿಯೆಯಲ್ಲಿ ಬಿಮ್ಸ್‌ನ ಹೊಸ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಿಮ್ಸ್ ನಿರ್ದೇಶಕರಾದ ಡಾ. ಅಶೋಕ ಕುಮಾರ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಓಝೋನ್ ಪದರನಾಶ ಆತಂಕಕಾರಿ



**ಧಾರವಾಡ :** ಭೂಮಿಯ ಮೇಲೆ ಮಾನವ ಹಾಗೂ ಇತರ ಜೀವರಾಶಿಗಳಿಗೆ ರಕ್ಷಾ ಕವಚವಾದ ಓಝೋನ್ ಪದರು ವಾಯು ಮಾಲಿನ್ಯದಿಂದ ನಾಶವಾಗುತ್ತಿರುವದು ಆತಂಕಕಾ–ರಿಯಾದ ಘಟನೆಯಾಗಿದೆ ಎಂದು ಮೊರಬ ಪ.ಪೂ ಮಹಾವಿದ್ಯಾಲಯದ ಪ್ರಾಚಾರ್ಯ ಸೈಯದ್ ಫಯಾಜ್ ಅಹ್ಮದ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಮಕ್ಕಳ ಮಂಟಪವು ಸುಳ್ಳದ ಶ್ರೀ ಶಿವಾನಂದ ಭಾರತಿ ಪ್ರೌಢ ಶಾಲೆಯಲ್ಲಿ ವಿಶ್ವ ಓಝೋನ್ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ 'ಓಝೋನ್ ಪದರು ರಕ್ಷಣೆಯಲ್ಲಿ ಸಹಕಾರಯುತ ಪ್ರಯತ್ನ' ಉಪನ್ಯಾಸ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಓಝೋನ್ ಪದರು ನಾಶವಾಗಲು ಮಾನವ ನಿರ್ಮಿತ ಕೈಗಾರಿಕೆಗಳು, ಏರ್ಕಂಡೀಷನರ್ಗಳು ನೇರ ಕಾರಣವಾಗಿದ್ದು, ಅವುಗಳಿಂದ ಉತ್ಪತ್ತಿಯಾಗುವ ಸಿ.ಎಫ್.ಸಿ, ಓಝೋನ ರಂಧ್ರ ಬೀಳುವಂತೆ ಮಾಡಿದೆ. ಈ ಪದರು ನಾಶದಿಂದ ಮಾನವ ಕೋಟಿ ಸೇರಿದಂತೆ ಭೂಮಿಯ ಮೇಲಿನ ಸಕಲ ಜೀವರಾಶಿಗಳಿಗೆ ಮಾರಕವಾಗಿದೆ. ಸೂರ್ಯನಿಂದ ಬಿಡುಗಡೆಯಾಗುವ ಅತ್ಯಂತ ಅಪಾಯಕಾರಿ ಅತಿ ನೇರಳೆ ಕಿರಣಗಳು ನೇರವಾಗಿ ಭೂಮಿಗೆ ಅಪ್ಪಳಿಸುವುದರಿಂದ ದೇಹ ರೋಗ ನಿರೋಧಕ ಶಕ್ತಿ ಕಳೆದುಕೊಳ್ಳುತ್ತದೆ. ಕುರುಡುತನ, ಚರ್ಮರೋಗದಂತಹ ಭೀಕರ ಕಾಯಿಲೆ ಉಂಟಾಗಿ ಮಣ್ಣು ನಿಸ್ಸಾರವಾಗಿ, ಬೆಳೆಹಾನಿ ಆಗುತ್ತಿದೆ. ಜೊತೆಗೆ ಸಕಲ ಜಲಚರ ಪ್ರಾಣಿಗಳು ಸತ್ತು ಹೋಗುತ್ತವೆ. ಈ ನಿಟ್ಟಿನಲ್ಲಿ ಸಿ.ಎಫ್.ಸಿ ನಿಯಂತ್ರಣ ಅಗತ್ಯವಾಗಿದೆ ಎಂದು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ವೀರಣ್ಣ ಒಡ್ಡೀನ ಮಾತನಾಡಿ, ಓಝೋನ ಪದರಿಗೆ ರಂಧ್ರ ಬಿದ್ದ ವಿಷಯ 1974 ರಲ್ಲೇ ಪತ್ತೆ ಹಚ್ಚಲಾಗಿದ್ದು, ಸಿ.ಎಫ್.ಸಿ ನಿಷೇಧಕ್ಕೆ ಭಾರತವೂ ಸೇರಿದಂತೆ ಜಗತ್ತಿನ ಅನೇಕ ದೇಶಗಳು "ಮಾಂಟ್ರಿಯಲ್ ಒಪ್ಪಂದ"ಕ್ಕೆ ಸಹಿ ಹಾಕಿವೆ. ಈಗಾಗಲೇ ಇದರ ದುಷ್ಪರಿಣಾಮದಿಂದ ಆಸ್ಟ್ರೇಲಿಯಾದಲ್ಲಿ ಗೋಧಿ ಬೆಳೆ ಸಂಪೂರ್ಣ ನಷ್ಟವಾಗಿದೆ. ಭವಿಷ್ಯದಲ್ಲಿ ಇದು ಗಂಡಾಂತರಕಾ–ರಿಯಾಗಿದ್ದು ಅಮೂಲ್ಯ ಜೀವ ರಾಶಿಗಳ ರಕ್ಷಾ ಕವಚ ಓಝೋನ್ ರಕ್ಷಿಸುವಲ್ಲಿ ಅಂತಾರಾಷ್ಟ್ರೀಯ ಸಹಕಾರಯುತ ಪ್ರಯತ್ನ ಅಗತ್ಯವಾಗಿದೆ ಎಂದು ಹೇಳಿದರು.

ಸುಳ್ಳದ ಗ್ರಾಮ ಪಂಚಾಯತ ಅಧ್ಯಕ್ಷ ಶಿವಕಲ್ಲಪ್ಪ ದೇಮಕ್ಕನವರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರೌಢ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಯಲ್ಲಪ್ಪ ಮಾದರ ಅಧ್ಯಕ್ಷತೆ ವಹಿಸಿದ್ದರು.

ಓಝೋನ್ ಕುರಿತು ಆಯೋಜಿಸಿದ್ದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಎಸ್.ಎಸ್. ಜಗತಾಪ ಸ್ವಾಗತಿಸಿದರು. ಪ್ರೊ. ಧನವಂತ ಹಾಜವಗೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಚಿತ್ರಾ ಜಿ. ನಿರೂಪಿಸಿದರು. ಎಸ್.ಎಸ್. ಹೊಸಮನಿ ವಂದಿಸಿದರು.

ಕಾರ್ಯಕ್ರಮದಲ್ಲಿ ಹಸಬಿ ಜಿ. ಎಸ್. ಮತ್ತು ಹಳ್ಳೂರ ಆರ್. ಬಿ. ಸೇರಿದಂತೆ ವಿದ್ಯಾರ್ಥಿಗಳು ಮುಂತಾದವರಿದ್ದರು.

# ಧಾರವಾಡ ನಗರ ಬಸ್ ನಿಲ್ದಾಣ ಕಾಮಗಾರಿ ಪ್ರಗತಿ

**ಧಾರವಾಡ:** ಧಾರವಾಡ ನಗರವು ವಿದ್ಯಾಕಾಶಿ ಎಂದು ಹೆಸರು ಪಡೆದಿದ್ದು, ಹುಬ್ಬಳ್ಳಿ ಧಾರವಾಡ ಅವಳಿ ನಗರಗಳಿಗೆ ಪ್ರತಿದಿನ ಭೇಟಿಕೊಡುವ ಸಾರ್ವಜನಿಕ ಪ್ರಯಾಣಿಕರ ಸಂಖ್ಯೆಯು ಹೆಚ್ಚುತ್ತಿದೆ. ಪ್ರಯಾಣಿಕರಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಧಾರವಾಡನಗರಸಾರಿಗೆಬಸ್‌ನಿಲ್ದಾಣವನ್ನು ಮರು ನಿರ್ಮಾಣಗೊಳಿಸಲಾಗುತ್ತಿದೆ ಎಂದು ಎನ್‌ಡಬ್ಲ್ಯೂಕೆಎಸ್‌ಆರ್‌ಟಿಸಿಯ ವ್ಯವಸ್ಥಾಪಕ ನಿರ್ದೇಶಕರಾದ ಪ್ರಿಯಾಂಗ ಅವರು ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಕಾಮಗಾರಿಗೆ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಜನೇವರಿ 8, 2024 ರಂದು ಶಂಕುಸ್ಥಾಪನೆಯನ್ನು ನೆರವೇರಿಸಿದ್ದರು. ಇಲಾಖೆ ಮತ್ತು ಸರ್ಕಾರದ ನಗರ ಭೂಸಾರಿಗೆ ನಿರ್ದೇಶನಾಲಯ ನೀಡಿರುವ ಅನುದಾನದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಕಾಮಗಾರಿಗೆ ನಿಗಪಡಿಸಿದ ಕಾಲಾವಧಿಯು 12 ತಿಂಗಳಾಗಿದ್ದು, ಒಪ್ಪಂದದ ಪ್ರಕಾರ ಗುತ್ತಿಗೆದಾರರು ಮೇ 14, 2025 ರಂದು ಪೂರ್ಣಗೊಳಿಸಬೇಕಿದ್ದು, ಅದಕ್ಕೂ ಪೂರ್ವದಲ್ಲೇ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಬಸ್ ನಿಲ್ದಾಣದ ಮುಖ್ಯ ಕಟ್ಟಡವು ಪ್ಲಿಂತ್ ಮಟ್ಟಕ್ಕೆ ಬಂದಿದ್ದು, ಪ್ಲೋರ್ ಕಾಲಂ ಎತ್ತರಿಸುವ ಕೆಲಸ ಹಾಗೂ ಬಸ್ ನಿಲುಗಡೆ ಅಂಕಣಗಳ ಕಾಲಂ ಕಾಂಕ್ರೀಟ್ ಕೆಲಸ ಪ್ರಗತಿಯಲ್ಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಸಜ್ಜೆ ಬೆಳೆಯ ಕ್ಷೇತ್ರೋತ್ಸವ




**ಕೊಪ್ಪಳ :** ಯಲಬುರ್ಗಾ ತಾಲೂಕಿನ ವಣಗೇರಿ ಗ್ರಾಮದಲ್ಲಿ ಜೈವಿಕ ಬಲವರ್ಧನೆಗೊಳಿಸಿದ ಸಜ್ಜೆ ಬೆಳೆಯ ಸಂಕರಣ ತಳಿ ವಿ.ಪಿ.ಎಮ್.ಹೆಚ್.–14 ಬೆಳೆಯ ಕ್ಷೇತ್ರೋತ್ಸವ ನಡೆಯಿತು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಎಂ.ವಿ.ರವಿ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾನಾಡಿ,

ವಿ.ಪಿ.ಎಮ್.ಹೆಚ್.–14 ಸಜ್ಜೆ ಬೆಳೆಯ ಸಂಕರಣ ತಳಿಯನ್ನು ಕೃಷಿ ವಿಶ್ವವಿದ್ಯಾಲಯದ ತಳಿ ವಿಜ್ಞಾನಿ ಡಾ. ಅಥೋನಿ ಬಂಡೇನವಾಜ್ ಅವರು ಅಭಿವೃದ್ಧಿಪಡಿಸಿದ್ದಾರೆ. ಮುಂಚೂಣಿ ಪ್ರಾತ್ರಕ್ಷಿ–ಕೆಯಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಕೊಪ್ಪಳದಿಂದ ಯಲಬುರ್ಗಾ ತಾಲ್ಲೂಕಿನ ಎರಡು ಗುಚ್ಛ ಗ್ರಾಮಗಳಾದ ವಣಗೇರಿ ಮತ್ತು ಮಂಗಳೂರುಗಳಿಂದ 10 ಜನ ರೈತ ಫಲಾನುಭವಿಗಳನ್ನು ಆಯ್ಕೆಮಾಡಿ ಉಚಿತವಾಗಿ ನೀಡಲಾಗಿದೆ.

ರೈತರು ಜೂನ್ ತಿಂಗಳ ಕೊನೆವಾರದಲ್ಲಿ ಬಿತ್ತನೆ ಮಾಡಿದ್ದು ಈಗ ಕಟಾವಿಗೆ ಸಿದ್ದವಾದ ಸಂದರ್ಭದಲ್ಲಿ ಈ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇದೊಂದು ಉತ್ತಮ ಸಂಕರಣ ತಳಿಯಾಗಿದ್ದು, ಮೊದಲಬಾರಿಗೆ ಜಿಲ್ಲೆಯಲ್ಲಿ ಪರಿಚಯಿಸಲಾಗುತ್ತಿದೆ. ಕೇವಲ 90 ದಿನಗಳ ಅವಧಿಯಲ್ಲಿ ಕಟಾವಿಗೆ ಬರುವ ಈ ತಳಿ ಸತು ಮತ್ತು ಕಬ್ಬಿಣದ ಅಂಶಗಳನ್ನು ಹೊಂದಿದ್ದು, ಉತ್ತಮ ತೂಕವುಳ್ಳದ್ದಾಗಿದೆ. ಮಧುಮೇಹಿ ಮತ್ತು ಸಂಧೀವಾತ ರೋಗಗಳಿಗೆ ಇದೊಂದು ಉತ್ತಮ ಔಷಧಿಯಾಗಿದ್ದು, ದಿನನಿತ್ಯ ಆಹಾರದಲ್ಲಿ ರೊಟ್ಟಿ ಅಲ್ಲದೆ ಸಜ್ಜೆ ಬಾತ್, ಸಜ್ಜೆ ಪಾಯಸ ಹೀಗೆ ಅನೇಕ ತರಹದ ಖಾದ್ಯಗಳನ್ನು ಮಾಡಿ ಸೇವಿಸಬಹುದಾಗಿದೆ ಎಂದರು.

ಎಕರೆಗೆ 2 ಕೆಜಿ. ಬೀಜ ಬಿತ್ತನೆ ಮಾಡಬಹುದಾಗಿದೆ. ಮತ್ತು ಎಕರೆಗೆ 20 ಕೆಜಿ. ಸಾರಜನಕ, 10 ಕೆಜಿ. ರಂಜಕ ನೀಡಿದರೆ ಎಕರೆಗೆ ಸುಮಾರು 8 ರಿಂದ 10 ಕ್ವಿಂಟಾಲ್ ಕಾಳಿನ ಇಳುವರಿ ಮತ್ತು 4 ಟನ್‌ನಷ್ಟು ಮೇವಿನ ಇಳುವರಿಯನ್ನು ಈ ತಳಿಯಿಂದ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಗುಳದಳ್ಳಿ ಕೃಷಿ ಸಂಶೋಧನಾ ಕೇಂದ್ರದ ಕ್ಷೇತ್ರ ಅಧೀಕ್ಷಕರು ಮತ್ತು ಬೀಜ ವಿಜ್ಞಾನಿ ಡಾ. ಹನುಮಂತಪ್ಪ ದಾಸನಳ್ಳಿ ಅವರು ತಳಿಯ ಕುರಿತು ತಿಳಿಸಿದರು. ಈ ಬೆಳೆಯನ್ನು ತೊಗರಿ ಮುಂತಾದ ಬೆಳೆಗಳೊಂದಿಗೆ ಮಿಶ್ರ ಬೆಳೆಯಾಗಿ ಬೆಳೆದಲ್ಲಿ ರೈತರು ಹೆಚ್ಚಿನ ಲಾಭ ಪಡೆಯಬಹುದೆಂದು ಮಾಹಿತಿ ನೀಡಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ವಾಮನಮೂರ್ತಿ ಅವರು ಮಾತನಾಡಿ, ಸಜ್ಜೆ ಬೆಳೆಗೆ ತಗಲುವ ಕೀಟ ರೋಗಗಳು ಮತ್ತು ಅವುಗಳ ಹತೋಟಿ ಕುರಿತು ಮಾಹಿತಿ ನೀಡಿದರು. ಎಕರೆಗೆ ಸುಮಾರು ರೂ.5,000 ಖರ್ಚು ತಗುಲಬಹುದಾದ ಈ ಬೆಳೆಗೆ ಈಗಿನ ಸರಕಾರ ಸೂಚಿಸಿದ ಬೆಂಬಲ ಬೆಲೆಗೆ ಅನುಗುಣವಾಗಿ ಎಕರೆಗೆ ರೂ.20,000ಕ್ಕಿಂತ ಹೆಚ್ಚು ನಿವ್ವಳ ಲಾಭ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಕಾಶ ಬಣಕಾರ, ಕ್ಷೇತ್ರ ಸಹಾಯಕರು, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ, ವಣಗೇರಿ ಗ್ರಾಮದ ಮಾಜಿ ಅಧ್ಯಕ್ಷರಾದ ಶಿವಮೂರ್ತಯ್ಯ, ಕೃಷಿ ಪರಿಕರಗಳ ಮಾರಾಟಗಾರರಾದ ಕಲ್ಯಾಣಯ್ಯ ಓಲಿ ಹಾಗೂ ಹತ್ತು ಜನ ಫಲಾನುಭವಿ ರೈತರು ಮತ್ತು ಗ್ರಾಮದ 30 ಕ್ಕೂ ಹೆಚ್ಚಿನ ರೈತರು ಭಾಗವಹಿಸಿದ್ದರು.

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಮತ್ತು ಸಹಿ ಆಂದೋಲನೆ–2024

## ಆತ್ಮಹತ್ಯೆ ಎನ್ನುವುದು ಮಹಾಪಾಪ. ಅದರಿಂದ ದೂರವಿರಬೇಕು: ಡಾ. ಬಿ.ಇ. ರಂಗಸ್ವಾಮಿ

**ಬೆಳಗಾವಿ :** ಈಗಿನ ಕಾಲದ ಆಧುನಿಕ ತಂತ್ರಜ್ಞಾನಗಳನ್ನು ವಿದ್ಯಾರ್ಥಿಗಳು ಒಳ್ಳೆಯ ಕಾರ್ಯಗಳಿಗೆ ಬಳಸಿ ಪ್ರಗತಿ ಸಾಧಿಸಬೇಕು. ತಮ್ಮ ಮಕ್ಕಳ ಮೇಲೆ ಪಾಲಕರು ಹೆಚ್ಚಿನ ನಿಗವಹಿಸಿ ಮಕ್ಕಳ ಭಾವನೆಗಳಿಗೆ ಮಹತ್ವವನ್ನು ನೀಡಿಬೇಕು. ಆದ್ದರಿಂದ ಆತ್ಮಹತ್ಯೆಯ ಸಂಖ್ಯೆ ಕಡಿಮೆ ಆಗಬಹುದು. ಆತ್ಮಹತ್ಯೆ ಎನ್ನುವುದು ಮಹಾಪಾಪ. ಅದರಿಂದ ದೂರವಿರಬೇಕು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಕುಲಸಚಿವರು ಡಾ.ಬಿ.ಇ.ರಂಗಸ್ವಾಮಿ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ, ವೈದ್ಯಕೀಯ ಮಹಾವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜಿಲ್ಲಾ ಆರೋಗ್ಯ ಮತ್ತು ಕು ಕ ಇಲಾಖೆ ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ತಾಲೂಕಾ ಆರೋಗ್ಯ ಅಧಿಕಾರಿಗಳು ಇವರ ಸಹಯೋಗದಲ್ಲಿ ಮಂಗಳವಾರ (ಸೆ.10) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಜರುಗಿದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ–2024ರ ಜಿಲ್ಲಾ ಮಟ್ಟದ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿಮ್ಸ್ ಆಸ್ಪತ್ರೆ ಮಾನಸಿಕ ವಿಭಾಗ ಮುಖ್ಯಸ್ಥರಾದ ಡಾ. ಚಂದ್ರಶೇಖರ.ಟಿ.ಆರ್ ಅವರು ಮಾತನಾಡಿ, ಆತ್ಮಹತ್ಯೆ ಇದು ಖಿನ್ನತೆಯನ್ನುವ ಒಂದು ಮಾನಸಿಕ ಕಾಯಿಲೆ ಆಗಿದ್ದು ತಕ್ಷಣ ರೋಗ ಲಕ್ಷಣಗಳನ್ನು ಗುರುತಿಸಿಕೊಂಡು ಮನೋವೈದ್ಯರ ಬಳಿ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆಯನ್ನು ಪಡೆದುಕೊಳ್ಳುವಂತೆ ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಡಾ.ಗೀತಾ ಕಾಂಬಳೆ ಅವರು ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ 1 ಲಕ್ಷ ಜನ ಸಂಖ್ಯೆಯಲ್ಲಿ12ರಷ್ಟುಆತ್ಮಹತ್ಯೆಪ್ರಕರಣಗಳು ಕಂಡು ಬಂದಿವೆ ಅದರಲ್ಲಿ ಕುಟುಂಬದ ಸಮಸ್ಯೆ(32.6%), ಕಾಯಲೆಯಿಂದ (23.6%), ಆರ್ಥಿಕ ತೊಂದರೆ (8.5%), ಪ್ರೇಮ ವ್ಯವಹಾರಗಳು(12.1%), ಮಾದಕ ವ್ಯಸನ(5.6%), ನಿರುದ್ಯೋಗ(4.8%) ಮತ್ತು 15–29 ವಯಸ್ಸಿನಲ್ಲಿ (35.6%), 30–44 ವಯಸ್ಸಿನಲ್ಲಿ (26.9%), ಪುರುಷರಲ್ಲಿ(71.3%) & ಸ್ತ್ರೀಯರಲ್ಲಿ(28.7%), ನಗರ ಪ್ರದೇಶದಲ್ಲಿ (37.5%), ಗ್ರಾಮೀಣ ಪ್ರದೇಶದಲ್ಲಿ (62.5%). ಇತ್ತಿಚ್ಚಿನ ದಿನಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ನಮ್ಮಲ್ಲಿ ಆಗುವಂತಹ ಯಾವುದೇ ರೀತಿಯ ಮಾನಸಿಕ ಸಮಸ್ಯೆಗಳಿಗೆ ಪರಿಹಾರವನ್ನು ಟೆಲಿ ಮಾನಸ್‌ಟೋಲ್ ಫ್ರೀ ನಂಬರ 14416 (Telemanasa Toll Free Number-14416) ಸಂಖ್ಯೆಗೆ ಕರೆ ಮಾಡಿ ಆಪ್ತಸಮಾಲೋಚನೆ ಪಡೆದುಕೊಳ್ಳವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಉಪನ್ಯಾಸಕರಾಗಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ನೋವೈದ್ಯರಾದ ಡಾ.ಸುಮೀತಕುಮಾರ ದುರಗೋಜಿ ಮತ್ತು ಡಾ.ಉತ್ತಮ ಶೇಲಾರಮ ವಿಶ್ವಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಬಗ್ಗೆ ಉಪನ್ಯಾಸ ನೀಡಿದರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮತ್ತು ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್‌ಡಿಸೆಬಿಲಿಟಿ(ಎ.ಪಿ.ಡಿ), ಇವರು ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕುರಿತು ಕಿರು ನಾಟಕವನ್ನು ಪ್ರದರ್ಶಿಸಿದರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಬೆಳಗಾವಿ ಇವರು ಪ್ರತಿಜ್ಞಾನ ವಿಧಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿಗಳು ಶಿವಾಜಿ ಮಾಳಗೆನ್ನವರ, ಮನೋವೈದ್ಯಕೀಯ ಸಮಾಜಕಾರ್ಯಕರ್ತರು ಸವಿತಾ ತಿಗಡಿ, ವಿ.ಟಿ.ಯುನ ಡಿಪಾರ್ಟ್ಮೆಂಟ್ ಆಫ್ ಕಂಪ್ಯೂಟರ್ ಸೈನ್ಸ್ ಆಂಡ್ ಇಂಜಿನಿಯರಿಂಗ್ ವಿಭಾಗದ ಪ್ರೋ.ವಿವೇಕ ರೆಡ್ಡಿ, ಆರೋಗ್ಯ ಇಲಾಖೆಯ ಎಲ್ಲ ಸಿಬ್ಬಂದಿಗಳು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದರು.

# ಕವಿ ಡಾ. ಸಿದ್ದಲಿಂಗಯ್ಯ ರಾಷ್ಟ್ರ ಕವಿಯಾಗಬೇಕಿತ್ತು: ಹಾಸಿಂಪೀರ

**ವಿಜಯಪುರ :** ಡಾ. ಸಿದ್ಧಲಿಂಗಯ್ಯ ಕಾವ್ಯ, ವಿಮರ್ಶಕ, ನಾಟಕ, ಪ್ರಬಂಧ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದವರು. ಕವಿ ಸಿದ್ದಲಿಂಗಯ್ಯ ರಾಷ್ಟ್ರ ಕವಿಗಳ ಸಾಲಿನಲ್ಲಿ ಸೇರಬೇಕಿತ್ತು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅಭಿಪ್ರಾಯ ವ್ಯಕ್ತಪಡಿಸಿದರು

ಜೈ ಭೀಮ ಸೇನಾ ಆಶ್ರಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಸೋಮವಾರ ಜರುಗಿದ ಡಾ. ಸಿದ್ದಲಿಂಗಯ್ಯನವರ ನಾಲ್ಕನೇ ಪುಣ್ಯ ಸ್ಮರಣೋತ್ಸವದ ನಿಮಿತ್ತ ನುಡಿನಮನ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಾ. ಸಿದ್ದಲಿಂಗಯ್ಯ ಅವರು ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರೊಂದಿಗೆ ವಿಜಯಪುರದಲ್ಲಿ ಎರಡು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅದೃಷ್ಟ ನನ್ನದು. ಪುಸ್ತಕ ಪ್ರಾಧಿಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾಗಿ ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರ ಚಿಂತನೆಗಳು ಇಪ್ಪತ್ತೊಂದನೆಯ ಶತಮಾನದ ಯುವಕರಿಗೆ ಸ್ಫೂರ್ತಿದಾಯಕವಾಗಿವೆ ಎಂದರು.

ಸಮಾರಂಭವನ್ನು ಕರ್ನಾಟಕ ರಾಜ್ಯ ನವನಿರ್ಮಾಣ ವೇದಿಕೆ ರಾಜ್ಯಾಧ್ಯಕ್ಷ ಶೇಷರಾವ ಮಾನೆ ಉದ್ಘಾಟಿಸಿ ಮಾತನಾಡಿ, ಕವಿ ಡಾ. ಸಿದ್ದಲಿಂಗಯ್ಯ ರಾಜ್ಯದ ಅಪರೂಪದ ಸಾಹಿತಿಯಾಗಿದ್ದರು. ಯಾರಿಗೆ ಬಂತು, ಎಲ್ಲಿಗೆ ಬಂತು ಸ್ವಾತಂತ್ರ್ಯ ಹಾಗು ಹೊಲೆಮಾದಿಗರ ಹಾಡು ಇವು ಎರಡು ಹಾಡುಗಳು ರಾಜ್ಯದಲ್ಲಿ ಅತ್ಯಂತ ಪ್ರಭಾವ ಬೀರಿದ್ದವು.

ಗ್ರಾಮದೇವತೆಗಳು ವಿಷಯ ಕುರಿತು ಸಂಶೋಧನಾತ್ಮಕ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದರು. ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಅಭಿಷೇಕ ಚಕ್ರವರ್ತಿ ಮಾತನಾಡಿ, ಡಾ. ಸಿದ್ದಲಿಂಗಯ್ಯನವರು ಸಾಮಾಜಿಕ ಸಮಾನತೆಗಾಗಿ ಕಾವ್ಯ ಸಾಹಿತ್ಯ ರಚಿಸಿ ಜನಪ್ರಿಯರಾಗಿದ್ದರು. ಡಾ ಅಂಬೇಡ್ಕರ್, ಪೆರಿಯಾರ, ವಸುದೇವ ಭೂಪಾಲ, ಲೋಹಿಯಾ ಮುಂತಾದವರ ವಿಚಾರಗಳಿಂದ ಆಕರ್ಷಿಸಿತರಾಗಿದ್ದರು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಡಾ. ಸಂಗಮೇಶ ಮೇತ್ರಿ ಮಾತನಾಡಿ, ಏಕಲವ್ಯ ನಾಟಕ ಪ್ರಸಿದ್ಧಿ ಪಡೆದುಕೊಂಡಿತು. ರಾಜ್ಯೋತ್ಸವ ಪ್ರಶಸ್ತಿ, ಡಾ: ಅಂಬೇಡ್ಕರ ಶತಮಾನೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ ಹೀಗೆ ಸಿದ್ದಲಿಂಗಯ್ಯನವರು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡು ನಾಡಿನ ಕೀರ್ತಿ ಬೆಳಗಿಸಿದರು ಎಂದರು.

ಮುಖ್ಯ ಅತಿಥಿಗಳಾದ ಅಲಿಸಾಬ ಖಡಕೆ, ಡಾ. ಸುರೇಖಾ ರಾಠೋಡ, ಸುಭಾಷ ನಾಯ್ಕೋಡಿ, ರಘುನಾಥ ಬಾಣಿಕೋಲ ಮಾತನಾಡಿದರು.

# ಮಹಾಲಿಂಗೇಶ್ವರ ಜಾತ್ರೆಯ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ

## ಪ್ರೇಕ್ಷಕರನ್ನು ರಂಜಿಸಿದ ನೇಪಾಳದ ದೇವತಾಪಾ ಕುಸ್ತಿ | ವೀಕ್ಷಣೆಗೆ ಬಂದ ಜನಸಾಗರ







**ಮಹಾಲಿಂಗಪುರ :** ಪಟ್ಟಣದ ಆರಾಧ್ಯದೈವ ಮಹಾಲಿಂಗೇಶ್ವರ ಜಾತ್ರೆಯ ನಿಮಿತ್ಯ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿ ಕ್ರೀಡಾಪ್ರೇಮಿಗಳು ಮತ್ತು ಗ್ರಾಮೀಣ ಭಾಗದ ಕುಸ್ತಿ ಪ್ರೀಯರ ಮನ ತಣಿಸುವಲ್ಲಿ ಯಶಸ್ವಿಯಾಯಿತು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ಕುಸ್ತಿಕಣ ಉದ್ಘಾಟಿಸಿದರು. ಮಹಾಲಿಂಗೇಶ್ವರ ದೇವಸ್ಥಾನದ ಈಶ್ವರ ಮಠದ ಕುಸ್ತಿ ಕಣಕ್ಕೆ ಪೂಜೆ ಸಲ್ಲಿಸಿದರು.

ಕುಸ್ತಿ ಪಂದ್ಯಾವಳಿಯಲ್ಲಿ ಅಂತರಾಜ್ಯ ಮತ್ತು ಅಂತರ ಜಿಲ್ಲೆ ಸೇರಿದಂತೆ ಒಟ್ಟು 46 ಜೋಡಿ ಪೈಲ್ವಾನ್‌ರು ಕುಸ್ತಿ ಅಖಾಡಕ್ಕಿಳಿದು ಗೆಲುವಿಗಾಗಿ ಸೆಣಸಾಡಿದರು. ಕುಸ್ತಿ ಆಟದಲ್ಲಿ ಡಾವ, ಆಟದಲ್ಲಿನ ವಿಭಿನ್ನ ಕಲೆಗಳ ಮೂಲಕ ಸುಮಾರು 6 ಗಂಟೆಗಳ ಸಾವಿರಾರು ಜನರಿಗೆ ಮನರಂಜನೆಯ ರಸದೌತಣ ನೀಡಿದರು. ನಂಬರ 1ರ ಕುಸ್ತಿಯಲ್ಲಿ ಆಡಿದ ಮಧ್ಯಪ್ರದೇಶದ ದೀಪಕಕುಮಾರ ಪೈ.ಹರಿಯಾಣ ಅವರನ್ನು ಸೋಲಿಸಿದ ಭಾರತ ಕೇಸರಿ ಜ್ಞಾನೇಶ್ವರ ಪೈ. ಜಮದಾಡೆ ಗೆಲುವಿನ ನಗೆ ಬೀರಿದರು.

**ದೇವತಾಪಾ ಕುಸ್ತಿಯ ಮಸ್ತಿ ಸುಪರ್ :**

ನಂಬರ 2ರ ಕುಸ್ತಿಯಲ್ಲಿ ಆಡಿದ ಮಧ್ಯಪ್ರದೇಶದ ಅಮೀತಕುಮಾರ ಹಾಗೂ ನೇಪಾಳದ ದೇವತಾಪ ಪೈ ನಡುವಿನ ಕುಸ್ತಿಯು ಪ್ರಸಕ್ತ ವರ್ಷದ ಜಾತ್ರಾ ಮಹೋತ್ಸವದ ಪಂದ್ಯಾವಳಿಯ ಪ್ರಮುಖ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು. ಇಬ್ಬರ ನಡುವೆ ನಡೆದ 30 ನಿಮಿಷಗಳ ರೋಚಕ ಕುಸ್ತಿಯಾಟದಲ್ಲಿ ನೇಪಾಳದ ದೇವತಾಪಾ ಅವರ ಕುಸ್ತಿ ಡಾವುಗಳು ಮತ್ತು ಎದುರಾಳಿಯಿಂದ ತಪ್ಪಿಸಿಕೊಳ್ಳುತ್ತಿದ್ದ ಚಾಣಾಕ್ಷ ಆಟವು ನೆರೆದಿದ್ದ 15 ಸಾವಿರಕ್ಕೂ ಅಧಿಕ ಜನರಿಗೆ ಸಕ್ಕತ್ ಮನರಂಜನೆ ನೀಡುವಲ್ಲಿ ಯಶಸ್ವಿಯಾಯಿತು. ಅಂತಿಮವಾಗಿ ತನ್ನ ಚಾಕಚಕ್ಯತೆಯ ಕುಸ್ತಿ ಡಾವುಗಳ ಮೂಲಕ ನೇಪಾಳದ ದೇವತಾಪಾ ಅವರು ಮಧ್ಯಪ್ರದೇಶದ ಅಮೀತಕುಮಾರ ಅವರನ್ನು ಚಿತ್ ಮಾಡಿ ಕುಸ್ತಿಯನ್ನು ನಿಕಾಲಿ ಮಾಡುವ ಮೂಲಕ ಗೆಲುವಿನ ನಗೆ ಬೀರಿದರು. ಈ ಸಮಯದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಬರುತ್ತಿದ್ದ ಶಿಳ್ಳೆ, ಚಪ್ಪಾಳೆ, ಅಭಿಮಾನದ ಕಿರುಚಾಟವು ಮುಗಿಲು ಮುಟ್ಟಿತ್ತು.

ನಂಬರ 3ರ ಕುಸ್ತಿಯಲ್ಲಿ ಪಂಜಾಬ ಕೇಸರಿ ಜೋಗಿಂದರ ಪೈ ಅವರನ್ನು ಸೋಲಿಸಿ ದಾವಣಗೇರೆಯ ಕಾರ್ತಿಕ ಪೈ ಕಾಟೆ ಗೆದ್ದು ಬೀಗಿದರು. ನಂಬರ 4ರ ಕುಸ್ತಿಯಲ್ಲಿ ಪುಣೆಯ ಆದಿತ್ಯಾ ಪೈ ಅವರನ್ನು ಸೋಲಿಸಿದ ನಿರ್ವಾನಟ್ಟಿಯ ಶಿವಾನಂದ ಪೈ ಗೆದ್ದು ಬೀಗಿದರು. ನಂಬರ 5ರ ಕುಸ್ತಿಯಲ್ಲಿ ಹರಿಯಾಣದ ಲಸುನ್ ಪೈ.ಬಾಗವತ ಅವರನ್ನು ಚಿತ್ ಮಾಡುವ ಮೂಲಕ ಪುಣೆಯ ನಾಗರಾಜ ಪೈ ಬಸಿಡೋನಿ ಕುಸ್ತಿಯನ್ನು ನಿಕಾಲಿ ಮಾಡಿ ಗೆಲುವು ಸಾಧಿಸಿದರು. ನಂಬರ 6ರ ಕುಸ್ತಿಯಲ್ಲಿ ಆಡಿದ ಗೋಡಗೇರಿಯ ಪ್ರಕಾಶ ಪೈ ಇಂಗಳಿ, ಕೋಲ್ಹಾಪೂರದ ಶಾರುಖ ಪೈ ಹಾಗೂ ಏಕೈಕ ಮಹಿಳಾ ಕುಸ್ತಿಯಲ್ಲಿ ಆಡಿದ ಬೆಳಗಾವಿಯ ಪ್ರೀತಿ ಚಿಕ್ಕೋಡಿ ಹಾಗೂ ಮಹಾಲಿಂಗಪುರದ ಮುಸ್ಕಾನ ನದಾಫ್ ಅವರ ನಡುವಿನ ಕುಸ್ತಿಗಳು ಸಮಬಲ ಸಾಧಿಸಿದವು.

**ಕುಸ್ತಿ ವಿಕ್ಷಣೆಗೆ 15 ಸಾವಿರ ಜನರು :**

ಪ್ರತಿವರ್ಷ ಮಹಾಲಿಂಗೇಶ್ವರ ಜಾತ್ರೆಯ ಮರುತೇರು ದಿನವೇ ನಡೆಯುತ್ತಿದ್ದ ಕುಸ್ತಿ ಪಂದ್ಯಾವಳಿಯನ್ನು ಇದೆ ಮೊದಲ ಬಾರಿಗೆ ಮರುತೇರು ಮಗಿದ ಮರುದಿನ ಪ್ರತ್ಯೇಕವಾಗಿ ಕುಸ್ತಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ನೆರೆಯ ಮೂಡಲಗಿ, ಮುಧೋಳ, ರಬಕವಿ–ಬನಹಟ್ಟಿ, ತೇರದಾಳ, ಜಮಖಂಡಿ ಸೇರಿದಂತೆ ಸುತ್ತಮುತ್ತಲಿನ 4–5 ತಾಲೂಕಿನ ಹತ್ತಾರು ಗ್ರಾಮಗಳಿಂದ ಕುಸ್ತಿ ವಿಕ್ಷಣೆಗಾಗಿ ಸುಮಾರು 15 ಸಾವಿರಕ್ಕಿಂತ ಅಧಿಕ ಜನರು ಕುಸ್ತಿ ವೀಕ್ಷಣೆಗಾಗಿ ಆಗಮಿಸಿದ್ದರು.

**ಜನದಟ್ಟಣೆ ನಿಯಂತ್ರಣಕ್ಕಾಗಿ ಹರಸಾಹಸ:**

ಕುಸ್ತಿ ಕಮಿಟಿಯವರು ವೀಕ್ಷರಿಗಾಗಿ 4–5 ಸಾವಿರ ಜನರು ಕುಳಿತುಕೊಳ್ಳುವಷ್ಟು ಗ್ಯಾಲರಿ ನಿರ್ಮಾಣ ಹಾಗೂ ಅತಿಥಿಗಳಾಗಿ ಎರಡು ಬೃಹತ್ ವೇದಿಕೆಗಳನ್ನು ನಿರ್ಮಿಸಿದ್ದರು. ಆದರೆ 15 ಸಾವಿರಕ್ಕೂ ಅಧಿಕ ಜನರು ಸೇರಿದ್ದರಿಂದ ಜನದಟ್ಟನೆಯ ನಿಯಂತ್ರಣಕ್ಕಾಗಿ ಬನಹಟ್ಟಿ, ತೇರದಾಳ, ,ಮಹಾಲಿಂಗಪುರ ಸೇರಿ ಮೂರು ಪಿಎಸ್ಐ 25ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಯು ಹರಸಾಹಸ ಪಡುವಂತಾಗಿತ್ತು. ಜನದಟ್ಟನೆಯಲ್ಲಿ ಓರ್ವ ವಯಸ್ಕರ ಕಾಲಿಗೆ, ಇನ್ನೊರ್ವನಿಗೆ ತಲೆಗೆ ಪೆಟ್ಟುಗಳಾಗಿವೆ. ಜನದಟ್ಟನೆಯಲ್ಲಿ 8–10 ಕುರ್ಚಿಗಳು ಮುರಿದಿವೆ.

ಜಾತ್ರಾ ಕಮಿಟಿ ಅಧ್ಯಕ್ಷ ರವಿಗೌಡ ಪಾಟೀಲ್, ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ್, ಕುಸ್ತಿ ಕಮಿಟಿ ಅಧ್ಯಕ್ಷ ನಿಂಗಪ್ಪ ಬಾಳಿಕಾಯಿ, ಶಾಸಕ ಸಿದ್ದು ಸವದಿ, ಹಿರಿಯರಾದ ಲಕ್ಷ್ಮಣಗೌಡ ಪಾಟೀಲ, ಸಿದ್ದು ಕೊಣ್ಣೂರ, ಪದ್ಮಜೀತ ನಾಡಗೌಡ, ದೇವಲ್ ದೇಸಾಯಿ, ಎ.ಆರ್.ಬೆಳಗಲಿ, ಸಿದ್ದುಗೌಡ ಪಾಟೀಲ್, ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ, ಅರವಿಂದ ಮಾಲಬಸರಿ, ಪ್ರಕಾಶ ಅರಳಿಕಟ್ಟಿ, ಈರಪ್ಪ ದಿನ್ನಿಮನಿ, ಮಹಾಲಿಂಗಪ್ಪ ತಟ್ಟಿಮನಿ, ಬಲವಂತಗೌಡ ಪಾಟೀಲ, ಮಹಾದೇವ ಮಾರಾಪೂರ, ಶಂಕರಗೌಡ ಪಾಟೀಲ, ಮಹೇಶ ಜಾಧವ, ಮಲ್ಲಪ್ಪ ಸಿಂಗಾಡಿ, ಚನ್ನಪ್ಪ ಪಟ್ಟಣಶೆಟ್ಟಿ ಸೇರಿದಂತೆ ಪುರಸಭೆ ಸದಸ್ಯರು, ಜಾತ್ರಾ ಕಮಿಟಿ ಮತ್ತು ಕುಸ್ತಿ ಕಮಿಟಿ ಪದಾಧಿಕಾರಿಗಳು ಇದ್ದರು. ಬಸನಗೌಡ ಪಾಟೀಲ್, ಹಣಮಂತ ಬುರುಡ, ಕೃಷ್ಣಗೌಡ ಪಾಟೀಲ್, ಬಸವರಾಜ ಘಂಟಿ, ಅಶೋಕಗೌಡ ಪಾಟೀಲ್, ಅಪ್ಪಾಶಿ ಕಾರಜೋಳ, ಮುದಕಪ್ಪ ಮಾಳಿ ಕುಸ್ತಿಪಂದ್ಯಾವಳಿಯ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ರಾಜು ಆಲಗೂರ ಕಾರ್ಯಕ್ರಮ ನಿರೂಪಿಸಿದರು.

## ನಾಲ್ಕನೇ ಬಾರಿಗೆ ಎಫ್‌ಕೆಸಿಸಿಐ ನಿರ್ದೇಶಕರಾಗಿ ರವೀಂದ್ರ ಕೋರೆ ಆಯ್ಕೆ



**ಚಿಮ್ಮಡ :** ರಾಜ್ಯದ ಪ್ರತಿಷ್ಠಿತ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ನಿರ್ದೇಶಕರಾಗಿ ಗ್ರಾಮದ ಸಿ.ಎ. ರವೀಂದ್ರ ಎಸ್. ಕೋರೆ ಸತತವಾಗಿ ನಾಲ್ಕನೇಯ ಬಾರಿಗೆ ಆಯ್ಕೆಯಾಗಿದ್ದು ಗ್ರಾಮಸ್ಥರು ಹರ್ಷ ವಕ್ತಪಡಿಸಿದ್ದಾರೆ. ರವಿಂದ್ರ ಕೋರೆಯವರು ವಾಣಿಜ್ಯ ಮತ್ತು ಕಾನೂನು ಪದವಿಧರರಾಗಿದ್ದು, ತಮ್ಮ ಪ್ರಾಥಮಿಕ ಶಿಕ್ಷಣವನ್ನು ಚಿಮ್ಮಡ ಗ್ರಾಮದಲ್ಲಿಯೇ ಪೋರೈಸಿದ್ದು, ಪ್ರೌಢ ಹಾಗೂ ಪದವಿ ಶಿಕ್ಷಣವನ್ನು ಮಹಾಲಿಂಗಪುರದ ಎಸ್.ಸಿ.ಪಿ.(ಕೆಎಲ್‌ಇ) ಮಹಾವಿದ್ಯಾಲಯದಲ್ಲಿ ಪೋರೈಸಿದ್ದಾರೆ. ಇತ್ತೀಚೆಗೆ ನಡೆದ ಪ್ರತಿಷ್ಠಿತ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಚುನಾವಣೆಯಲ್ಲಿ ವೃತ್ತಿಪರ ಕ್ಷೇತ್ರದಿಂದ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಉತ್ತರ ಕರ್ನಾಟಕ ಭಾಗದಿಂದ ಪ್ರಪ್ರಥಮ ಬಾರಿಗೆ ವೃತ್ತಿಪರ ಕ್ಷೇತ್ರದಿಂದ ಆಯ್ಕೆಯಾಗಿರುವ ರವೀಂದ್ರ ಕೋರೆ ಪತ್ರಿಕೆಯೊಂದಿಗೆ ಮಾತನಾಡಿ ಕಳೆದ ಬಾರಿ ಹುಬ್ಬಳ್ಳಿಯಲ್ಲಿ ರಾಜ್ಯದ ಯುವ ಕೈಗಾರಿಕೋದ್ಯಮಿಗಳಿಗೆ ಪ್ರೋತ್ಸಾಹ ಮತ್ತು ತರಬೇತಿ ನೀಡುವ ಮೂಲಕ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಕಾರ್ಯಕ್ರಮಗಳನ್ನು ಸಂಸ್ಥೆಯ ಮೂಲಕ ಹಮ್ಮಿಕೊಂಡಿದ್ದು ಅದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವ ಗುರಿಯನ್ನು ಹೊಂದಿದ್ದು ಶೀಘ್ರದಲ್ಲಿಯೇ ಇದರ ರೂಪುರೆಷೆ ತಯಾರಿಸಲಾಗುವುದೆಂದರು.

ಗ್ರಾ. ಪಂ. ಅಧ್ಯಕ್ಷರು, ಸದಸ್ಯರು, ಅಭಿಮಾನಿಗಳು ಹಾಗೂ ಸ್ಥಳಿಯ ವಿರಕ್ತ ಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಕೋರೆಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಉತ್ಸವಗಳು ವೈಷ್ಯಮ್ಯಗಳಿಗೆ ಕಾರಣವಾಗುತ್ತಿವೆ: ಶಿವಾನಂದ



**ಜಮಖಂಡಿ :** ಗಣೇಶ ಉತ್ಸವಗಳು ಭಾವಕ್ಯತೆಯ ಸಂಕೇತವಾಗದೆ ಜಾತಿ–ಧರ್ಮಗಳ ನಡುವೆ ವೈಷ್ಯಮ್ಯಗಳಿಗೆ ಕಾರಣವಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲೂಕಿನ ಜಕನೂರ ಗ್ರಾಮದ ಮಾದಣ್ಣ ಮದಗೊಂಡೇಶ್ವರ ಸಿದ್ದಾಶ್ರಮದಲ್ಲಿ 29ನೇ ಸಿದ್ಧಸಿರಿಸಂಭ್ರಮ, ಬಂಡಾರ ಸಂಸ್ಕೃತಿ, ಜನಪದಹಾಗೂಡೊಳ್ಳಿನಕಲಾಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗಣೇಶ ಉತ್ಸವದಲ್ಲಿ ಕೋಮು ಗಲಭೆಗಳು ಸಮಾಜದ ಹಿತಕ್ಕೆ ಮಾರಕವಾದ ಬೆಳವಣಿಗೆ. ಮಾನವೀಯ ಮೌಲ್ಯ ಎತ್ತಿಹಿಡಿಯುವ ಆಚರಣೆಗಳ ಅವಶ್ಯಕವಾಗಿದೆ. ರಾಜ್ಯಗಳ ಗಡಿಪ್ರದೇಶ, ನೀರು ಹಂಚಿಕೆ, ಭಾಷೆಗಳ ವಿವಾದಗಳು ನಡೆಯುತ್ತಿದ್ದು ಗಣೇಶ ಉತ್ಸವ ಸೇರಿಕೊಳ್ಳಬಾರದು. ಭಾವೈಕ್ಯತೆಗೆ ಧಕ್ಕೆ ಬರದಂತಹ ಆಚರಣೆಗಳು ನಡೆಯಬೇಕು. ಭಾವೈಕ್ಯತೆಯ ಸಂಕೇತವಾಗಿರುವ ನಮ್ಮ ದೇಶದಲ್ಲಿ ಕೋಮು ಗಲಭೆಗಳಿಗೆ ಅವಕಾಶ ಕೊಡಬಾರದು ಎಂದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿ, ಸಿಎಂ ಸಿದ್ಧರಾಮಯ್ಯ ಮೇಲೆ ವಿನಾಕಾರಣ ಆರೋಪಗಳನ್ನು ಮಾಡುತ್ತಿರುವ ವಿರೋಧಪಕ್ಷದ ರಾಜಕೀಯ ಕುತಂತ್ರ ಎಂದಿಗೂ ಫಲಿಸುವುದಿಲ್ಲ. ಸರಳ ಸಜ್ಜನ ನುಡಿದಂತೆ ನಡೆದ ರಾಜಕಾರಣಿ ಸಿದ್ಧರಾಮಯ್ಯ ಅವರ ವರ್ಚಸ್ಸಿಗೆ ಧಕ್ಕೆ ತರುವ ನಿಟ್ಟಿನಲ್ಲಿ ಕುತಂತ್ರ ನಡೆಯುತ್ತಿದೆ ಎಂದರು.

ಮಾಜಿ ಸಚಿವ ಸಿ.ಎಂ.ಇಬ್ರಾಹಿಂ, ರಾಜ್ಯ ಕಾಂಗ್ರೆಸ್ಸ ವಕ್ತಾರ ನಿಕೇತರಾಜ ಮೌರ್ಯ ಮಾತನಾಡಿದರು. ಬೆಂಗಳೂರಿನ ಮುಕ್ತೇಶ್ವರ ಒಡೆಯರ ಸ್ವಾಮಿಗಳ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದರು.

ವೇದಿಕೆಯಲ್ಲಿಮಾದುಲಿಂಗಮಹಾರಾಜರು, ಬತಗುಣಕಿ ಅಮೋಘ ಸಿದ್ದೇಶ್ವರ ಮಹಾರಾಜರು, ಹೊಟಗಿಯ ಯಲ್ಲಾಲಿಂಗ ಮಹಾರಾಜರು, ಸಾರವಾಡದ ಚಿಕ್ಕಪ್ಪಯ್ಯ ಮಹಾರಾಜರು, ಕಲ್ಲೂರಿನ ದೊಡ್ಡಪ್ಪ ಮಹಾರಾಜರು, ರಾಹುಲ ಕಲೂತಿ, ಸಿದ್ದು ಕೊಣ್ಣೂರ, ಅರ್ಜುನ ದಳವಾಯಿ, ಸುಶೀಲಕುಮಾರ ಬೆಳಗಲಿ, ವರ್ಧಮಾನ ನ್ಯಾಮಗೌಡ, ಬಸವರಾಜ ಪಾಟೀಲ, ಸಿದ್ದು ಮೀಸಿ, ರಂಗನಗೌಡ ಪಾಟೀಲ ಸಹಿತ ಹಲವರು ಇದ್ದರು.

ಎಸ್.ಎ. ಟೆಕ್ಕಣ್ಣವರ ಸ್ವಾಗತಿಸಿದರು. ಮಹಾದೇವ ಪೂಜಾರಿ ನಿರೂಪಿಸಿ, ವಂದಿಸಿದರು.

## ಜಿಲ್ಲಾ ಉಪಾಧ್ಯಕ್ಷರಾಗಿ ಪರಪ್ಪ ನೇಮಕ



**ಚಿಮ್ಮಡ :** ಬಿಜೆಪಿ ಧುರೀನ ಪರಪ್ಪ ಮುಧೋಳ ಅವರನ್ನು ಜಿಲ್ಲಾ ಹಿಂದುಳಿದ ವರ್ಗದ (ಓಬಿಸಿ) ಮೋರ್ಚಾ ಉಪಾಧ್ಯಕ್ಷರನ್ನಾಗಿ ನೆಮಕಗೊಳಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಆದೇಶ ಹೊರಡಿಸಿದ್ದಾರೆ. ತಾ.ಪಂ. ಉಪಾಧ್ಯಕ್ಷರಾಗಿ, ಎಪಿಎಂಸಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ ಪರಪ್ಪ ಮುಧೋಳ ಈ ಜವಾಬ್ದಾರಿಯನ್ನು ಪಕ್ಷ ನಿಷ್ಠೆಯಿಂದ ನಿಭಾಯಿಸಬೇಕೆಂದು ಶಾಂತಗೌಡ ಸೂಚಿಸಿದ್ದಾರೆ.

## ಮೈತ್ರಾದೇವಿಗೆ ಶಿಕ್ಷಣ ರತ್ನ ಪ್ರಶಸ್ತಿ




**ಚಿಮ್ಮಡ :** ಸ್ಥಳೀಯ ಸರಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾದ್ಯಾಯೆ ಶ್ರೀಮತಿ ಮೈತ್ರಾದೇವಿ ಶಂಕ್ರಪ್ಪಾ ಜಿಟ್ಟಿಯವರಿಗೆ "ರಾಷ್ಟ್ರೀಯ ಶಿಕ್ಷಣ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಬೆಂಗಳೂರಿನ ಭಾರತರತ್ನ ಸರ್ ಎಂ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತೀಷ್ಠಾನ ಟ್ರಷ್ಟ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರದ ಸಹಕಾರದಲ್ಲಿ ಆಯೋಜಿಸಲಾಗಿದ್ದ ಎಂ. ವಿಶ್ವೇಶ್ವರಯ್ಯ 163ನೇ ಜನ್ಮದಿನಾಚರಣೆ ಪ್ರಯುಕ್ತ ನೀಡಲಾಗುವ ಈ ಪ್ರಶಸ್ತಿಯು ಈ ಬಾರಿ ಶ್ರೀಮತಿ ಮೈತ್ರಾದೇವಿ ಜಿಟ್ಟಿಯವರು ಪಡೆದಿಕೊಂಡಿದ್ದು ಗ್ರಾಮದ ಶಿಕ್ಷಣ ಪ್ರೇಮಿಗಳು ಹರ್ಷಗೊಂಡಿದ್ದಾರೆ.

ಸ್ಥಳೀಯ ಸರಕಾರಿ ಪ್ರೌಢಶಾಲೆಯ ಎಸ್ಡಿಎಂಸಿ ಪಧಾದಿಕಾರಿಗಳು, ಗ್ರಾ.ಪಂ. ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಗ್ರಾಮದ ಪ್ರಮುಖರು ಜಿಟ್ಟಿಯವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

## ಸರ್ವರ ಸಹಕಾರದಿಂದ ಸಹಕಾರ ಸಂಘಗಳ ಅಭಿವೃದ್ಧಿ: ಚಳ್ಳಗಿಡದ



**ಅಮೀನಗಡ:** ಸರ್ವರ ಸಹಕಾರದಿಂದ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ ಎಂದು ಜಿಪಂ ಮಾಜಿ ಉಪಾಧ್ಯಕ್ಷ, ಭುವನೇಶ್ವರಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್.ಎಸ್.ಚಳ್ಳಗಿಡದ ಹೇಳಿದರು.

ಪಟ್ಟಣದ ಭುವನೇಶ್ವರಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ನಡೆದ 33ನೇ ವಾರ್ಷಿಕ ಸರ್ವ ಸಾಧರಣೆ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಸಹಕಾರ ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ಸಂಘದ ಎಲ್ಲ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ಸಹಕಾರ ಬಹಳ ಮುಖ್ಯ ಎಂದರು.

ಸಂಘವು 44 ಲಕ್ಷ ಶೇರು ಬಂಡವಾಳ, 3 ಕೋಟಿ 76 ಲಕ್ಷ ಠೇವಣಿ ಸಂಗ್ರಹಣೆ ಮಾಡಿದ್ದು, 5 ಕೋಟಿ 45 ಲಕ್ಷ ದುಡಿಯುವ ಬಂಡಿವಾಳ ಹೊಂದಿದ್ದು, 25 ಲಕ್ಷ ನಿವ್ವಳ ಲಾಭಗಳಿಸಿದೆ ಎಂದರು.

ಪ್ರಧಾನ ವ್ಯವಸ್ಥಾಪಕ ಪಿ.ಎಸ್.ಚಳ್ಳಗಿಡದ ವರದಿ ವಾಚನ ಮಾಡಿದರು. ಸಂಘದ ಉಪಾಧ್ಯಕ್ಷ ಎಸ್.ಎನ್.ದೇಸಾಯಿ, ನಿರ್ದೇಶಕರಾದ ವ್ಹಿ.ಎಸ್.ಲಿಂಗದಾಳ, ಆಯ್.ಎನ್.ಮಂಟಾ, ಎಮ್.ಆಯ್.ಮುರಾಳ, ಎಸ್.ಎಸ್.ಖಾದ್ರಿ, ಎಸ್.ಬಿ.ಶಿರೋಳ, ಎ.ಬಿ.ಗುಡ್ಡದ, ವಾಯ್. ಆರ್.ಕುರಿ, ಎಸ್.ಆಯ್.ಗೌಡರ, ಡಾ|ಎಸ್. ಎಸ್.ಕ್ಯಾದಿಗ್ಗೇರಿ, ಕೆ.ಎಸ್.ಚಳ್ಳಗಿಡದ ಸೇರಿದಂತೆ ಇನ್ನಿತರರು ಇದ್ದರು.

## ಆತ್ಮಜ್ಞಾನವೆಂದರೆ ಅರಿವಿನ ತಾಯಿ: ಡಾ. ಪಾಟೀಲ



**ರಾಯಬಾಗ :** ಮನುಷ್ಯ ಇಂದು ಹತ್ತಾರು ಜ್ಞಾನಗಳನ್ನು ಪಡೆದುಕೊಂಡಿದ್ದಾನೆ; ಭೂಮಿ ಮೇಲೆ ಅಷ್ಟೇ ಅಲ್ಲ ಆಕಾಶದಲ್ಲಿಯೂ ನೆಲೆಸಲು ಹೊರಟಿದ್ದಾನೆ. ವೈಜ್ಞಾನಿಕ ತಂತ್ರಗಾರಿಕೆಗಳಿಂದ ಜಗತ್ತನ್ನು ಅಂಗೈಯಲ್ಲಿ ಇಟ್ಟುಕೊಂಡಿದ್ದಾನೆ. ಆದರೆ ತನ್ನ 'ನೆಮ್ಮದಿ' ಮರೆತಿದ್ದಾನೆ. ನೆಮ್ಮದಿ ಇಲ್ಲದ ಮನುಷ್ಯನ ಸಾಧನೆ ವ್ಯರ್ಥ. ಆದ್ದರಿಂದ ಮನುಷ್ಯನಿಗೆ ಆತ್ಮಜ್ಞಾನ ಅತ್ಯಂತ ಮುಖ್ಯ. ಆತ್ಮಜ್ಞಾನವೆಂದರೆ ಅರಿವಿನ ತಾಯಿ ಎಂದು ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ ಅಧ್ಯಕ್ಷ ಡಾ. ಬಿ. ಎಂ. ಪಾಟೀಲ ಹೇಳಿದರು.

ಅವರು ರಾಯಭಾಗದ ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ ಅಡಿಯಲ್ಲಿ ಶರಣ ಚೇತನ ಬಳಗ ಹಮ್ಮಿಕೊಂಡ ಮಾಸಿಕ ಆಧ್ಯಾತ್ಮ ಜ್ಞಾನದಾಸೋಹ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಪಿ. ಬಿ. ಮುನ್ಯಾಳ ಶರಣರ ವಚನ ಸಾಹಿತ್ಯ ಮತ್ತು ಭಾರತದ ಸಂವಿಧಾನ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿ

ಬಸವಾದಿ ಶಿವಶರಣರು–ಶರಣೆಯರು ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ನಾಡಿಗೆ ನೀಡಿದ ಕೊಡುಗೆ ಅಪಾರ. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಇಡೀ ಜಗತ್ತಿನಲ್ಲಿಯೇ ಮೊಟ್ಟಮೊದಲನೆಯ ಪ್ರಜಾಪ್ರಭುತ್ವ ಸಂಸ್ಥೆ ಎಂದು ಹೆಮ್ಮೆಪಡಬೇಕು. "ಶರಣರ ವಚನಗಳು" ಭಾರತದ ಪ್ರಥಮ ಸಂವಿಧಾನದಂತೆ ಸಮಾನತೆ, ಮಹಿಳಾ ಸ್ವಾತಂತ್ರ್ಯ, ಜನಮನಕ್ಕೆ ಸ್ಫೂರ್ತಿ, ಪ್ರೇರಣೆ ನೀಡಿದವು ಎಂಬ ಮಾತಿನಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲವೆಂದರು. ಸಂವಿಧಾನದಲ್ಲಿರುವ ಮುಖ್ಯ ಸಂಗತಿಗಳಾದ ಸ್ವಾತಂತ್ರ್ಯ, ಸಮಾನತೆ , ಬಂದುತ್ವ– ಈ ಮೊದಲಾದ ತತ್ವಗಳನ್ನು ಹನ್ನೆರಡನೇ ಶತಮಾನದ ಬಸವಾದಿ ಶರಣರ ನುಡಿದು ನಡೆದು ಆಚರಣೆಗೆ ತಂದಿದ್ದರು. ಶರಣರ ವಚನಗಳು ಸಂವಿಧಾನದ ಎಲ್ಲಾ ಆಶಯಗಳನ್ನು ಒಳಗೊಂಡಿವೆ ಎಂದು ವಚನಗಳನ್ನು ಸಾಕ್ಷಿಗೊಳಿಸಿ ವಿವರಿಸಿದರು.

ನಂತರ ದೈಹಿಕ ಶಿಕ್ಷಣ ಕಾಲೇಜ್ ಪ್ರಾಚಾರ್ಯ ಡಾ. ಆರ್. ಕೆ. ಪಾಟೀಲ ಮಾತನಾಡಿ ಮನುಷ್ಯನ ಬದುಕಿನಲ್ಲಿ ಏನೇ ಸಾಧಿಸ ಬೇಕಾದರು ದೈಹಿಕ ಮತ್ತು ಮಾನಸಿಕ ಆರೋಗ್ಯ ಮುಖ್ಯವೆಂದರು. ನಿಯಮಿತ ಆಹಾರ ಸೇವನೆ, ದೈಹಿಕ ಶ್ರಮ, ವಿಚಾರ ಕ್ರಮ– ಇವು ನಮ್ಮ ಆರೋಗ್ಯದ ಸರಳ ವಿಧಾನಗಳೆಂದು ಅಭಿಪ್ರಾಯಪಟ್ಟರು . ರಮ್ಯಾ ಟಕ್ಕನ್ನವರ, ಪಾವನಿ ಮತ್ತು ಶಾಂಭವಿ ದಡವಾಡ ವಚನ ಪ್ರಾರ್ಥಿಸಿದರು. ಸಂಗಮೇಶ ಹಿರೇಹಾಳ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲ ಶರಣ ಬಂಧುಗಳಿಗೆ ಸಂವಿಧಾನ ಪೀಠಿಕೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಚ್. ಎ. ಭಜಂತ್ರಿ ಸಮರ್ಪಣೆ ಹೇಳಿದರು.

ರಾಜಕುಮಾರ ಮಡಿವಾಳ, ಶ್ರೀಶೈಲ ಹೊಸೂರ, ಸದಾನಂದ ಹಳಿಂಗಳಿ, ಎಸ್. ಆರ್. ಸೊಲ್ಲಾಪುರ, ಮಲ್ಲೇಶ್ ದೊಡಮನಿ, ಎಂ. ಎಂ. ಪಾಟೀಲ್, ಎಂ. ಎಸ್. ಉಜ್ಜಯಿನಿಮಠ,

ಬಸಲಿಂಗ ಟಕ್ಕನ್ನವರ, ಆರ್. ಸಿ. ತುಳಸಿಗೇರಿ, ಭಾಗ್ಯಶ್ರೀ ಹಿರೇಮಠ, ಅನ್ನಪೂರ್ಣ ಹಿರೇಮಠ, ಭಾರತಿ ಭಜಂತ್ರಿ, ಸವಿತಾ ದಿಬ್ಬದಮನಿ, ರೂಪಾ ಮಾಳಿ, ವೇದಾ ಮೇತ್ರಿ, ಪ್ರತಿಭಾ ಮಾಳಿ ಉಪಸ್ಥಿತರಿದ್ದರು.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಬೆಳಗಾವಿ :** ಪ್ರಸ್ತಕ ಸಾಲಿನ ಬೈಲಹೊಂಗಲ ಹಾಗೂ ಕಿತ್ತೂರ ತಾಲೂಕಿನ ವ್ಯಾಪ್ತಿಯಲ್ಲಿ ವಿವಿಧ ಶಾಲೆ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವೇತನ ಕಾರ್ಯಕ್ರಮಡಿಯಲ್ಲಿ ಅರ್ಜಿ ಅಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ http://sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08288–236230 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೈಲಹೊಂಗಲ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು, (ಗ್ರೇಡ–2) ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಎರಡನೇ ವರ್ಷದ ಪುಣ್ಯ ಸ್ಮರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಪೆನ್ನು ನೋಟಬುಕ್ ವಿತರಣೆ



**ಮುದ್ದೇಬಿಹಾಳ :** ತಾಲೂಕಿನ ಹಡಗಲಿ ಗ್ರಾಮದ ದಿವಂಗತ ಬೀರಪ್ಪ ಹುಡೇದ ಟವರ ಎರಡನೇ ವರ್ಷದ ಪುಣ್ಯ ಸ್ಮರಣೆ–ಯ ಅಂಗವಾಗಿ ಕುಟುಂಬಸ್ಥರು ಗ್ರಾಮದ ಸರಕಾರಿ ಶಾಲೆಯ ಮಕ್ಕಳಿಗೆ ಪೆನ್ನು ,ನೋಟ್ ಪುಸ್ತಕ ಮತ್ತು ಮಧ್ಯಾಹ್ನದ ಬಿಸಿಊಟ ಮಾಡುವುದಕ್ಕೆ ತಟ್ಟೆ(ಗಂಗಾಳು)ನ್ನು ನೀಡಿ–ದರು. ಬೀರಪ್ಪ ಅವರ ಮೊಮ್ಮಗನಾದ ಪತ್ರಕರ್ತ ಮುತ್ತು ಟಕ್ಕಳಕಿ ಅವರು ಮಾತನಾಡಿ ನಮ್ಮ ಅಜ್ಜನವರ ನೆನಪು ಸದಾಕಾಲ ನಮ್ಮ ನಮ್ಮೆಲ್ಲರ ಜೋತೆ ಜೀವಂತ ವಾಗಿರಬೇಕು.ಅವರ ಪ್ರತಿ ಪುಣ್ಯಸ್ಮರಣೆಯಂದು ನಾನು ಮತ್ತು ನನ್ನ ಕುಟುಂಬದವರು ಅವರ ಹೆಸರಿನಲ್ಲಿ ಸಮಾಜಕ್ಕೆ ಅಥವಾ ಮಕ್ಕಳ ಶಿಕ್ಷಣಕ್ಕೆ ಪೂರಕವಾಗುವ ವಸ್ತುಗಳನ್ನಾಗಲಿ ಕೊಡುಗೆ ಕೊಡಬೇಕೆಂದು ತಿರ್ಮಾಸಿದ್ದೆವೆ ಎಂದು ಮಾತನಾಡಿದರು.

ಶಿಕ್ಷಕರಾದ ಮೋಹನ್ ಚವ್ಹಾಣ ಮಾತನಾಡಿ ಬೀರಪ್ಪ ಅಜ್ಜವರ ಮಕ್ಕಳು ಮತ್ತು ಮೊಮ್ಮಗನಾದ ಮುತ್ತು ಟಕ್ಕಳಕಿ ಅವರು ಮಕ್ಕಳ ಶಿಕ್ಷಣ–ಕ್ಕೆ ಪೂರಕವಾಗುವ ವಸ್ತುಗಳನ್ನು ಕೊಡುವುದು ತುಂಬಾ ಸಂತೋಷದ ವಿಷಯ. ಈ ಸೌಲಭ್ಯ ಪಡೆದ ಮಕ್ಕಳು ನೀವು ಕೂಡಾವ ಮುಂದೆ ಒಳ್ಳೆಯ ವ್ಯಕ್ತಿ ಆಗಬೇಕು. ನೀವುಗಳು ಕೂಡಾ ಸಮಾಜಕ್ಕೆ ಇಂತಹ ಕೊಡುಗೆಗಳನ್ನು ನೀಡಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಮುಖ್ಯಗುರುಗಳಾದ ಶಶಿಕಾಂತ ಚಲವಾದಿ, ಎಸ್ ಎನ್ ಹೂಗಾರ, ಕುಟುಂಬಸ್ಥರಾದ ನೀಲಮ್ಮ ಹುಡೆದ, ಕಸ್ತೂರಿ ಹುನಗುಂದ, ದೇವಮ್ಮ ಪಾಟೀಲ, ಅಕ್ಕಮ್ಮ ಟಕ್ಕಳಕಿ, ಗುಳಮ್ಮ ರಾ ಅಮಾತಿಗೌಡ, ಜಯಶ್ರೀ ಬ ಚಿಕ್ಕನ್ನಳ್ಳಿ, ಭಾಗೀರತಿ ಭಿ ಜೀನಗಿ, ಮುತ್ತು ಹುಡೆದ, ಹಣಮಂತ ಹುಡೆದ, ವಿದ್ಯಾ ಹ ಹುಡೆದ, ರೇಣುಕಾ ಹುಡೆದ, ಪ್ರವೀಣ ಹುಡೆದ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State